ಹಾಕಿ, ಸರಿಯಾಗಿ ಕಳಸಾ ಟೌನಿನ ಎಲ್ಲಾ ಜನರಿಗೂ ನೀರು ಒದಗಿಸಲು ವ್ಯವಸ್ಥೆ ಮಾಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಶಾಸಕರು ಎತ್ತಿದ ಪ್ರಶ್ನೆ ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತ್‌ರಾಜ್ ಮಂತ್ರಿಗಳಿಗೆ ಸಂಬಂಧಪಟ್ಟಿದ್ದಾಗಿದೆ. ಈ ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತಂದು ಸೂಕ್ತ ಕಾರ್ಯಕ್ರಮವನ್ನು ಏರ್ಪಾಡು ಮಾಡಲಾಗುವುದು.

2.05 ಪಿ.ಎಂ.

(9) ಕೋಮು ಗಲಬೆಯಲ್ಲಿ ಹಾನಿಗೊಳಗಾದವರಿಗೆ ಪರಿಹಾರ ಕೊಡುವುದು

SRI SADAT ALI KHAN (CHANNAPATNA) : The Chief Minister during his visit to Ramanagaram, Channapatna, Channarayapatna, Davangere and other places, immeditaly after assuming the office to have on the spot inspection of the destruction took place in the communal clashes in all these places, stated that the Government jobs will be provided to the next kith and kin of those who have lost their lives during the communal clashes. Inspite of the assurance given by the Chief Moinister in reply to my Starred Question No.1000, it is stated that there is no proposal to provide appointments to the Members of the family losing their lives in the communal clashes. I request the Chief Minister to implement the assurances given by him immediately.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಯವರ ಪರವಾಗಿ ಈ ಹೇಳಿಕೆಯನ್ನು ಕೊಡಲಿಕ್ಕೆ ಇಚ್ಚಪಡುತ್ತೇನೆ. ಪ್ರಶ್ನೆ ಸಂಖ್ಯೆ 1000ಕ್ಕೆ ಒದಗಿಸಿರುವ ಉತ್ತರ ಪ್ರಸ್ತುತದಲ್ಲಿ ಜಾರಿಯಲ್ಲಿರುವ ನಿಯಮಗಳ ಮತ್ತು ಸೂಚನೆಗಳ ಆಧಾರದ ಮೇಲಿರುತ್ತದೆ. ಕೋಮು ಗಲಭೆಗಳಲ್ಲಿ ಮೃತ ಪಟ್ಟ ವ್ಯಕ್ತಿಗಳ ಕುಟುಂಬದ ಸದಸ್ಯರಿಗೆ ಯಾವ್ಯಾವ ರೀತಿ ನೌಕರಿಯನ್ನು ಒದಗಿಸಲು ಸಾಧ್ಯ ಎನ್ನುವ ಪ್ರಶ್ನೆಯನ್ನು ಈ ರೀತಿಯ ಪ್ರಕರಣಗಳಲ್ಲಿ ಆದ್ಯತೆ ನೀಡುವ ಬಗ್ಗೆ ಸಂವಿಧಾನದ ಅನುಚ್ಛೇದ 14 ಮತ್ತು 16ರ ನಿರ್ಬಂಧನಾತ್ಮಕ ಷರತ್ತುಗಳನ್ನು ಗಮನದಲ್ಲಿಟ್ಟುಕೊಂಡು ಪರಿಶೀಲಿಸಲಾಗುವುದು.

ಉಪಾಧ್ಯಕ್ಷರು : ಈಗ ಸಬೆ ಎದ್ದು ಮತ್ತೆ 3-05ಕ್ಕೆ ಸಮಾವೇಶಗೊಳ್ಳುವುದು. ಸದನವು 2-06 ಗಂಟೆಗೆ ಮೇಲೆದ್ದು ಮತ್ತೆ 3-05ಕ್ಕೆ ಸೇರುವುದೆಂದು ನಿಶ್ಚಯಿಸಿತು.

ಸದನವು 3-15 ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷಿಣಿ ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾವ

+ ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ನಾನು ಸಂಪೂರ್ಣವಾದ ವಿರೋಧವನ್ನು ಸೂಚಿಸಿ ಕೆಲವು ವಿಚಾರಗಳನ್ನು ಇಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಈ ಸರ್ಕಾರ ಬಂದನಂತರ ಇದರ ಹಿಂದೆ ಇದ್ದ ಜನತಾದಳದ ಸರ್ಕಾರದವರು ತಂದಿದ್ದಂತಹ ಯೋಜನೆಗಳನ್ನು ಕೈಬಿಟ್ಟಿದ್ದಾರೆ. ಅದು ರೈತರ ಪರವಾದ ಯೋಜನೆಗಳಿರಬಹುದು ಅಥವಾ ಕಡುಬಡವರ ಪರವಾದ ಯೋಜನೆಗಳು ಅಥವಾ ವಿದ್ಯಾರ್ಥಿಗಳ ಪರವಾದ ಯೋಜನೆಗಳಾಗಿರಬಹುದು.

ಇವತ್ತು ಯಾವ ರೈತರನ್ನು ನಮ್ಮ ಸರ್ಕಾರದ ಬೆನ್ನೆಲುಬು ಎಂದು ಈ ಸರ್ಕಾರ ಹೇಳುತ್ತಿದೆ ಆ ರೈತನಿಗೆ ಯಾವುದೇ ತರಹದ ರಿಯಾಯಿತಿ ಅಥವಾ ಯಾವುದೇ ತರಹದ ಏಳಿಗೆಗೆ ಬೇಕಾದ ಯೋಜನೆ ಈ ಒಂದು ರಾಜ್ಯಪಾಲರ ಭಾಷಣದಲ್ಲಿ ಇಲ್ಲ. ನಾವು ಅಧಿಕಾರದಲ್ಲಿದ್ದಾಗ ರೈತರಿಗೆ 7 ರೂಪಾಯಿ ರಿಯಾಯಿತಿ ಬಡ್ಡಿ ದರದಲ್ಲಿ ಸಾಲ ಕೊಟ್ಟಿರಬಹುದು ಅಥವಾ ಬಡ್ಡಿ ಮನ್ನಾ ಮಾಡಿರಬಹುದು. ಹೀಗೆ ಹಲವಾರು ಯೋಜನೆಗಳನ್ನು ರೈತರ ಪರವಾಗಿ ಹಾಕಿಕೊಂಡಿದ್ದೆವು ಅದೇ ರೀತಿ ಈ ಸರ್ಕಾರ ಬಂದಮೇಲೆ ವಿದ್ಯಾರ್ಥಿಗಳಿಗೆ ಪುಕ್ಕಟೆ ಪಠ್ಯಪುಸ್ತಕ ಕೊಡುವ ಯೋಜನೆಯನ್ನು ಬಂದ್ ಮಾಡಿದ್ದಾರೆ, ಸಮವಸ್ತ್ರ ಕೊಡುವ ಯೋಜನೆಯನ್ನು ಬಂದ್ ಮಾಡಿದ್ದಾರೆ. ಹಸಿರು ಕಾರ್ಡ್ ಮೇಲೆ ಕೆ.ಜಿ. 2ರೂಪಾಯಿನಂತೆ ಅಕ್ಕಿಯನ್ನು ಕೊಡುತ್ತಿದ್ದೆವು, ಅದನ್ನು ಎರಡೂವರೆ ರೂಪಾಯಿ ಮಾಡಿದ್ದಾರೆ. ಈ ಸರ್ಕಾರ ಬಂದಮೇಲೆ ಕನ್ನಡ ನಾಡಿನ ಜನತೆಯ ಮೇಲೆ ಬಹಳ ದೊಡ್ಡ ಭಾರವನ್ನು ಹಾಕಿದ್ದಾರೆ. ಅದು ಕೆ.ಎಸ್.ಆರ್.ಟಿ.ಸಿ. ದರವನ್ನು ಹೆಚ್ಚು ಮಾಡಿದಿರಿ ಅಥವಾ ವಿದ್ಯುಚ್ಛಕ್ತಿ ದರವನ್ನು ಹೆಚ್ಚು ಮಾಡಿರಲಿ. ವಿದ್ಯಾರ್ಥಿಗಳ ಬಸ್ ಪಾಸ್ ದರವನ್ನು ಕೂಡ ಹೆಚ್ಚು ಮಾಡಿದ್ದಾರೆ. ಯಾರಿಗೇನೂ ಇವರು ಬಿಟ್ಟಿಲ್ಲ. ಕೊನೆಗೆ ಸಂಜೆ ವೇಳೆ ಯಾರು ಔಷಧಿ ಕುಡಿಯುವುದಕ್ಕೆ ಹೋಗುತ್ತಾರೆ ಆ ಜನರಿಗೂ ಕೂಡ ದರವನ್ನು ಹೆಚ್ಚು ಮಾಡಿದ್ದಾರೆ. ಯಾರನ್ನೂ ಬಿಡುವುದಕ್ಕೆ ಹೋಗಿಲ್ಲ. ಹೀಗಾಗಿ ಈ ಸರ್ಕಾರಕ್ಕೆ ನ್ಯಾಯವಾಗಿ ಹೇಳಬೇಕಾದರೆ ಇವತ್ತು ಅಧಿಕಾರದಲ್ಲಿ ಉಳಿಯುವ ಯಾವುದೇ ಅಧಿಕಾರ ಇಲ್ಲ. ಈಗಾಗಲೇ ಹೇಳಿದ ಹಾಗೆ ರಾಜ್ಯಪಾಲರ ಭಾಷಣದಲ್ಲಿ ಯಾವುದೇ ತರಹ ಆಶಾಭಾವನೆಯನ್ನು ಕಾಣುವ ಹಾಗೆ ಇಲ್ಲ. ಕೇವಲ ಪೊಳ್ಳು ಘೋಷಣೆಗಳು. ಹಿಂದಿನ ಜನತಾ ಸರ್ಕಾರ ಮತ್ತು ಜನತಾ ದಳದ ಸರ್ಕಾರ ಯಾವ ಯೋಜನೆಯನ್ನು ತರಲಾಗಿತ್ತು, ಯಾವ ನಿರ್ಣಯವನ್ನು ಮಾಡಿತ್ತು ಅದು ಯಾವುದನ್ನು ಕಾರ್ಯಗತ ಮಾಡಲಿಲ್ಲ. ಭೂಸುಧಾರಣೆ ಕಾಯಿದೆಗೆ ತಿದ್ದುಪಡಿ, ಪ್ರಾಗ್‌ಮೆಂಟೇಷನ್ ಆಕ್ಟಿಗೆ ತಿದ್ದಿಪಡಿಗಳು ಇರಬಹುದು, ಆ ಎಲ್ಲಾ ಮಸೂದೆಗಳು ರೆಡಿ ಇದ್ದವು. ಸರ್ಕಾರ ಹೋದಮೇಲೆ ಮಾಡಲಿಲ್ಲ. ಹಿಂದಿನ ಸರ್ಕಾರ ರೆಡಿ ಮಾಡಿದ್ದ ಎಲ್ಲ ಮಸೂದೆಗಳು ಹಾಗೇ ಆದವು. ಮಾನ್ಯ ರಾಜ್ಯಪಾಲರ ಭಾಷಣ 2ನೇ ಪುಟದಲ್ಲಿ ಹೇಳಿದ್ದಾರೆ,

" Eversince the assumption of office of my Govevrnment, very strenous and concious efforts have been made to provide a healing touch and also substantial relief to the people affected by these clashes and to restore the faith of the people in living together peacefully"..

ಅಂದರೆ ತಮ್ಮ ಸರ್ಕಾರ ಬಂದನಂತರ, ಇದರ ಹಿಂದೆ ಇದ್ದ ಸರ್ಕಾರ, ವೀರೇಂದ್ರ ಪಾಟೀಲರ ಸರ್ಕಾರ ಈ ದಿಕ್ಕಿನಲ್ಲಿ ಯಾವುದೇ ಕೆಲಸ ಮಾಡಿಲ್ಲ, ನಾವು ಮಾಡಿದ್ದೇವೆಂದು ಸ್ಪಷ್ಟವಾಗಿ ಹೇಳಿದ ಹಾಗೆ ಇದೆ ಇವತ್ತು ಅದನ್ನು ಇವರೇ ಒಪ್ಪಿಕೊಂಡಿದ್ದಾರೆ. ಮಾನ್ಯ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿದ್ದಾಗ ಗಲಭೆಗಳು ಸಾಕಷ್ಟು ಆದವು, ಅವರಿಗೆ ಅವನ್ನು ತಡೆಗಟ್ಟಲಿಕ್ಕೆ ಸಾಧ್ಯವಾಗಲಿಲ್ಲ, ನಾವು ಬಂದಮೇಲೆ ತಡೆಗಟ್ಟಿದ್ದೇವೆಂಬ ವಾದವನ್ನು ನಮ್ಮ ಮುಂದಿಟ್ಟಿದ್ದಾರೆ. ಇವತ್ತು ಮಾನ್ಯ ಬಂಗಾರಪ್ಪನವರ ಸರ್ಕಾರ ಬಂದನಂತರ ಅಡ್ಮಿನಿಸ್ಟ್ರೇಷನ್ ಟೋಟಲಿ ಕೊಲ್ಯಾಪ್ಸ್ ಆಗಿದೆ. ಐ.ಎ.ಎಸ್.ಅಧಿಕಾರಿಗಳಲ್ಲಿ ಮೊದಲಬಾರಿಗೆ ಗುಂಪುಗಾರಿಕೆ ಶುರುವಾಗಿದೆ. ಮೊದಲ ಬಾರಿಗೆ ಐ.ಎ.ಎಸ್. ಅಧಿಕಾರಿಗಳು ಪ್ರೆಸ್ ಮೀಟ್ ಮಾಡಿ ನಾವು ಪ್ರಾಮಾಣಿಕರು, ಅವರು ಅಲ್ಲವೆಂದು ಹೇಳುತ್ತಿದ್ದಾರೆ. ಪೋಲೀಸ್ ಅಧಿಕಾರಿಗಳಲ್ಲಿ ಮಾರಲ್ ಕಂಪ್ಲೀಟ್ ಆಗಿ ಹೋಗಿದೆ ಇವತ್ತು ಯಾವ ಅಧಿಕಾರಿಗಳ ವರ್ಗಾವಣೆ ಯಾವಾಗ ಆಗುತ್ತದೆಂದು ಹೇಳುವುದಕ್ಕೆ ಬರುವುದಿಲ್ಲ. ಮತ್ತು ಭ್ರಷ್ಟಾಚಾರ ಇವತ್ತು

ಗಗನಕ್ಕೆ ಹೋಗಿದೆ. ನಮ್ಮ ಸರ್ಕಾರ ಇದ್ದಾಗ ಭ್ರಷ್ಟಾಚಾರ ಇರಲಿಲ್ಲವೆಂದು ಹೇಳುವುದಿಲ್ಲ, ಆಗಲೂ ಇತ್ತು. ಆದರೆ ಬೀದಿಯಲ್ಲಿ ಹೆಜ್ಜೆ ಹೆಜ್ಜೆಗೆ ಮಾತನಾಡಿಕೊಳ್ಳುತ್ತಾರೆ. ಯಾವುದೇ ವರ್ಗಾವಣೆ ಆಗಬೇಕಾದರೆ ಅದರ ಹಿಂದೆ ಎಷ್ಟೋ ಜನ ಇರುತ್ತಾರೆ. ಇವತ್ತಿನ ದಿವಸ ಮುಖ್ಯ ಮಂತ್ರಿಗಳ ಕಛೇರಿಯಲ್ಲಿ ವಸೂಲಿ ದೇವ (ವಾಸುದೇವ) ಎಂಬವರು ಕೆಲಸ ಮಾಡುತ್ತಿದ್ದಾರೆ. ಅವರ ಕೆಲಸ ವರ್ಗ ಮಾಡುವುದು, ರೊಕ್ಕ ಸಂಗ್ರಹಿಸುವುದು, ಮತ್ತೆ ಆತನಿಗೆ ಬೇರೆ ಯಾವುದೇ ಕೆಲಸ ಇಲ್ಲ. ಇದು ಮುಖ್ಯ ಮಂತ್ರಿಗಳಿಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ಜನಸಾಮಾನ್ಯರು ಮಾತನಾಡುತ್ತಿದ್ದಾರೆ. ಇದರ ಬಗ್ಗೆ ಮುಖ್ಯ ಮಂತ್ರಿಗಳು ಗಮನ ಹರಿಸಬೇಕೆಂದು ನಾನು ಅವರಲ್ಲಿ ವಿನಂತಿಸುತ್ತೇನೆ. ನಾನು ಮುಖ್ಯ ಮಂತ್ರಿಗಳ ಕ್ಲಾಸ್‌ಮೆಟ್ ನಾನು ಏನು ಬೇಕಾದರೂ ಮಾಡಬಹುದು ಆತ ಹೇಳುತ್ತಿದ್ದಾನೆ. ಆ ಪ್ರಕಾರ ಅಲ್ಲಿ ಕೆಲಸ ನಡೆಯುತ್ತಿದೆ.

ಇವತ್ತು ಮಾನ್ಯ ಮಂತ್ರಿಗಳು ನಾವು ಲಾ ಅಂಡ್ ಆರ್ಡರ್ ಇಂಪ್ರೂವ್ ಮಾಡಿದ್ದೇವೆ ಎಂದು ಹೇಳಿದರು. ಮೊನ್ನಮೊನ್ನೆ ನಮ್ಮ ಜಿಲ್ಲೆಯಲ್ಲಿ ಒಬ್ಬ ಮಹಿಳೆ ತನ್ನ ಮೇಲೆ ಅತ್ಯಾಚಾರ ಆಯಿತು ಎಂದು ಒಬ್ಬ ಶಾಸಕರ ಮೇಲೆ ದೂರು ಮಾಡಿದರು. ಆಗ ಏನಾಯಿತು ಅಂದರೆ ಪೋಲೀಸ್ ಅಧಿಕಾರಿಗಳು ಇನ್ವೆಸ್ಟಿಗೇಷನ್ ಮಾಡಿ ಅವರ ಮೇಲೆ ಛಾರ್ಜ್‌ಷೀಟ್ ಫೈಲ್ ಮಾಡಿದ್ದಾರೆ. ಕೇಸ್ ಆಗಿದೆ. ಪೋಲೀಸ್ ಅಧಿಕಾರಿಗಳಿಗೆ ಏನು ಅವಾರ್ಡ್ ಕೊಟ್ಟಿದ್ದಾರೆ ಅಂದರೆ ಅವರನ್ನು ಸಿ.ಓ.ಡಿ.ಗೆ ಟ್ರಾನ್ಸ್‌ಫರ್ ಮಾಡಿದ್ದಾರೆ. ಕಾರವಾರದಲ್ಲಿ ಮೊದಲನೇ ಬಾರಿ ಯಾರು ಗೋವಾ ಪೆನ್ನಿ ಸ್ಮಗಲ್ ಮಾಡುತ್ತಿದ್ದರು ಆ ಜನ ಎಕ್ಸೈಜ್ ಅಧಿಕಾರಿಗಳಿಗೆ ಹೊಡೆದಿದ್ದಾರೆ. ಮೊನ್ನೆ ಮುಖ್ಯಮಂತ್ರಿಗಳು ಬಂದಾಗ ಆರೋಪಿಗಳು ಮುಖ್ಯಮಂತ್ರಿಗಳ ಹಿಂದೆ ಹಿಂದೆ ತಿರುಗಾಡುತ್ತಿದ್ದರು. ಅವರ ಮೇಲೆ ಛಾರ್ಜ್‌ಷೀಟ್ ಫೈಲ್ ಆಗಿದೆ. ಆದರೆ ಪೋಲೀಸರು ಏನು ಹೇಳುತ್ತಾರೆ, ಅಂದರೆ ಅವರು ಅಬ್‌ಸ್ಕಾಂಡಿಂಗ್ ಆಗಿದ್ದಾರೆ, we are not able to catch them ಎಂದು ಹೇಳುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಜಿಲ್ಲೆಯಲ್ಲಿದ್ದಾಗ ಅವರ ಹಿಂದೆ ಕಾರಿನಲ್ಲಿ ತಿರುಗಾಡುತ್ತಿದ್ದರು. ಅಸಾಲ್ಟ್, ಮರ್ಡರ್, ಫೆನ್ನಿ ಸ್ಮಗ್ಲಿಂಗ್ ಈ ಕೇಸ್‌ಗಳು ಅವರ ಮೇಲಿದೆ. ಗೋಪಾಲ್ ಎಂಬ ಒಬ್ಬ ಆರೋಪಿಯನ್ನು ಹಿಡಿಯುವುದಕ್ಕಾಗಲಿಲ್ಲ. ಅವರು ಕಾರವಾರ ಜಿಲ್ಲೆಯಲ್ಲೇ ಇದ್ದಾರೆ. ಏಕೆಂದರೆ ಅವರಿಗೆ ಆಶೀರ್ವಾದ ಇದೆ. ಅಧಿಕಾರದಲ್ಲಿ ಎಷ್ಟು ಜನರಿದ್ದಾರೊ ಅಷ್ಟು ಜನರ ಆಶೀರ್ವಾದ ಇದೆ. ಪೋಲೀಸ್ ರೆಕಾರ್ಡ್ಸ್‌ನಲ್ಲಿ ಅಬ್‌ಸ್ಕಾಂಡಿಂಗ್ ಎಂದು ಇದೆ. ಈಮಟ್ಟಕ್ಕೆ ಇವರು ಪರಸ್ಥಿತಿಯನ್ನು ತಂದಿಟ್ಟಿದ್ದಾರೆ. ಮೊನ್ನೆ ರಾಮನಗರದಲ್ಲಿ ಬೆಳಗಾಂನಿಂದ ಹೈರ್ಡ್ ಗೂಂಡಾಗಳನ್ನು ತಂದು ಸ್ಥಳೀಯ ಜನರಿಗೆ ಹೊಡೆಸಿದ್ದಾರೆ. ಬಹಿರಂಗವಾಗಿ ಹೊಡೆದಿದ್ದಾರೆ.

ಶ್ರೀ ಸಿ. ಬೈರೇಗೌಡ : ಯಾವ ರಾಮನಗರ?

ಶ್ರೀ ಆರ್.ವಿ. ದೇಶಪಾಂಡೆ : ಉತ್ತರ ಕನ್ನಡ ಜಿಲ್ಲೆಯಲ್ಲಿರುವ ರಾಮನಗರ. ಅಲ್ಲಿ ರಿಹ್ಯಾಬಲಿಟೇಷನ್ ಸೆಂಟರ್ ಇದೆ. ನಿಮ್ಮ ರಾಮನಗರ ಅಲ್ಲ, ನಮ್ಮ ರಾಮನಗರ ಕಾರವಾರದಲ್ಲಿ ಎಸ್.ಪಿ.ಮತ್ತು ಡಿವೈ.ಎಸ್.ಪಿ.ವರ್ಗಾವಣೆ ಯಾಗಿದೆ. ಏತಕ್ಕೆಂದರೆ ಕಾಯಿದೆಬದ್ಧವಾಗಿ ಎನ್‌ಕ್ವೈರಿ ಮಾಡಿದ್ದಕ್ಕಾಗಿ ಎಸ್.ಪಿ.ಮತ್ತು ಡಿವೈ.ಎಸ್.ಪಿ. ಟ್ರಾನ್ಸ್‌ಫರ್ ಆಗಿದ್ದಾರೆ. ನೀವು ಟ್ರಾನ್ಸ್‌ಫರ್ ಮಾಡಿ. ಯಾವ ಅಧಿಕಾರಿ ಎಲ್ಲಿರಬೇಕು ಎನ್ನುವುದು ನಿಮ್ಮ ನಿರ್ಣಯ. ನಿಮ್ಮ ಸರ್ಕಾರದಲ್ಲಿ ಯಾವ ಅಧಿಕಾರಿ ಎಲ್ಲಿರಬೇಕು ಎಬ ನಿರ್ಣಯವನ್ನು ನೀವು ಮಾಡಬೇಕಾಗುತ್ತದೆ. ನಾವು ಮಾಡುವುದಕ್ಕೆ ಅಧಿಕಾರ

ಇಲ್ಲ, ಆದರೆ ಅದಕ್ಕೂ ಒಂದು ವೇಳೆ ಇದೆ. ಸಮಯ ಇದೆ. ಟ್ರಾನ್ಸ್‌ಫರ್ ಜನವರಿಯಲ್ಲಿ, ಫೆಬ್ರವರಿಯಲ್ಲಿ, ಮೇನಲ್ಲಿ ಮಾಡುತ್ತೀರಿ. ಆದರೆ ಸಹ ಒಂದು ಕನ್‌ಸಿಡರೇಷನ್ ಇದೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ನಿಮ್ಮ ಹಾಗೆ ಟೆಲಿಕ್ಸ್‌ನಲ್ಲಿ ಮಾಡಿಲಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ನಾವು ಮಾಡಿದ್ದರೆ ಹೇಳಿ. ನಾವು ಕೆಲವು ತಪ್ಪು ಮಾಡಿದ್ದರಿಂದ ಇಲ್ಲಿ ಕುಳಿತ್ತಿದ್ದೇವೆ. ನಿಮಗೆ ಎಚ್ಚರಿಕೆ ಕೊಡುತ್ತಿದ್ದೇನೆ. ನೀವು ಈ ಕಡೆ ಬರುವುದಾದರೆ ಬನ್ನಿ, ನಮ್ಮ ತಕರಾರಿಲ್ಲ. ನಮಗೆ ಆದಷ್ಟು ಬೇಗ ಅಲ್ಲಿಗೆ ಹೋಗುವ ಇಚ್ಛೆ ಇದೆ. ಆದಷ್ಟು ಬೇಗ ನಾವು ಅಲ್ಲಿ ಹೋಗಬೇಕು ಎಂದು ಇಚ್ಛೆ ಮಾಡುತ್ತಿದ್ದೇವೆ. ನೀವು ಬರುವುದಾದರೆ ಬನ್ನಿ. ಆದ್ದರಿಂದ ಇವತ್ತು..

ಶ್ರೀ ಸಿ. ಬೈರೇಗೌಡ : ಇವತ್ತು ಲೋಕಸಭೆ ವಿಸರ್ಜನೆಯಾಗಿದೆ. ಅದರ ಜೊತೆಯಲ್ಲೇ ವಿಧಾನಸಭೆಯನ್ನು ಕೂಡ ವಿಸರ್ಜನೆ ಆಗುತ್ತದೆ ಎಂಬ ಮಾತನ್ನು ಜನರು ಆಡುವುದನ್ನು ಕೇಳುತ್ತಿದ್ದೇವೆ. ಸದನ ಮುಗಿಸಿಕೊಂಡು ಹೊರಗಡೆ ಹೋದರೆ ವಿಧಾನಸಭೆ ವಿಸರ್ಜನೆ ಆಗುತ್ತದೆಯೇ ಎಂಬ ಮಾತನ್ನು ಎಲ್ಲಾದರೂ ಹೇಳಬೇಕಾಗುತ್ತದೆ. ಸರ್ಕಾರದವರು ವಿಧಾನಸಬೆಯನ್ನು ಕೂಡ ವಿಸರ್ಜನೆ ಮಾಡತಕ್ಕ ಆಲೋಚನೆ ಏನಾದರೂ ಇದೆಯೇ ಅಥವಾ ಮಾಡವುದಿಲ್ಲವೇ ಎನ್ನತಕ್ಕದ್ದನ್ನು ಹೇಳಬೇಕು. ಏಕೆಂದರೆ, ವಿಸರ್ಜನೆ ಮಾಡುವುದಾದರೆ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿದರೂ ವ್ಯರ್ಥವಾಗುತ್ತದೆ. ನಾವು ಹೇಳತಕ್ಕದ್ದೆಲ್ಲವೂ ವ್ಯರ್ಥವಾಗುತ್ತದೆ. ಆದ್ದರಿಂದ ಸರ್ಕಾರದವರ ನಿಲುವು ಏನು ಎಂಬುವುದನ್ನು ದಯವಿಟ್ಟು ತಿಳಿಸಬೇಕು. ನಮ್ಮ ಕ್ಷೇತ್ರಕ್ಕೆ ಹೋದರೆ ಜನ ಕೇಳುತ್ತಾರೆ. ನೀವು ಶಾಸಕರಾಗಿರುತ್ತೀರೋ ಇಲ್ಲವೋ ಎಂದು ಕೇಳುತ್ತಾರೆ. ಅವರಿಗೆ ನಾವು ಏನು ಉತ್ತರ ಹೇಳುವುದು? ಆದ್ದರಿಂದ ಸರ್ಕಾರದವರು ದಯವಿಟ್ಟು ಉತ್ತರ ಹೇಳಬೇಕು.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಬೈರೇಗೌಡರು ಹೇಳಿದರಲ್ಲ, ನಾನು ಮೊನ್ನೆ ಹುಬ್ಬಳ್ಳಿಗೆ ಹೋಗಿದ್ದೆ. ಅಲ್ಲಿ ಲೋಕಸಬೆ ವಿಸರ್ಜನೆ ಆಗುತ್ತಿದೆ, ನಿಮ್ಮ ಅಸ್ಸೆಂಬ್ಲಿಯೂ ವಿಸರ್ಜನೆ ಆಗುತ್ತದೆಯೇ ಎಂದು ಕೇಳಿದರು. ಏತಕ್ಕೆ ಈ ಪ್ರಶ್ನೆ ಹಾಕುತ್ತಿದ್ದೀರಿ ಎಂದು ನಾನು ಕೇಳಿದೆ. ಅದಕ್ಕೆ ಅವರು ಹೇಳಿದರು, ಕಾಂಗ್ರೆಸ್‌ನಲ್ಲಿ ಬಹಳ ಕಚ್ಚಾಟ ನಡೆಯುತ್ತಿದೆ ಬಹಳ ಜಗಳ ಮಾಡುತ್ತಿದ್ದಾರೆ, ಒಂದು ಕಡೆ ವೀರಪ್ಪ ಮೊಯಿಲಿ-ಖಾರ್ಗೆಯವರು ಜಗಳ, ಇನ್ನೊಂದು ಕಡೆ ಘೋರ್ಪಡೆ-ರಂಗನಾಥ್ ಜಗಳ ಆಗುತ್ತಿದೆ ಅದಕ್ಕೆ ಈಗಾಗಲೇ ಬಂಗಾರಪ್ಪನವರು ವಿಧಾನಸಭೆ ವಿಸರ್ಜನೆಗೆ ಶಿಫಾರಸು ಮಾಡಿದ್ದಾರೆ ಎಂದು ಹೇಳಿದರು. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಲೋಕಸಭೆ ವಿಸರ್ಜನೆಯಾಗಿದೆ, ನೀವೂ ವಿಸರ್ಜನೆ ಮಾಡಿದರೆ ಒಳ್ಳೆಯದು ಎರಡೂ ಕೂಡಿ ಒಮ್ಮಲೇ ಚುನಾವಣೆ ಮಾಡೋಣ ಎಂದು ಹೇಳಿದೆ. ಅದರ ಬಗ್ಗೆ ಮಾನ್ಯ ಶಿಕ್ಷಣ ಸಚಿವರು ಏನು ಹೇಳುತ್ತಾರೋ ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಉಪಾಧ್ಯಕ್ಷರೆ, ತಮಗೇನಾದರೂ ಈ ಬಗ್ಗೆ ವರ್ತಮಾನ ಇದ್ದರೆ ತಿಳಿಸಬೇಕು. ಏನೂ ಇಲ್ಲ ತಾನೆ?

ಉಪಾಧ್ಯಕ್ಷರು : ನಿಮಗೂ ಇಲ್ಲ, ನಮಗೂ ಇಲ್ಲ.

ಶ್ರೀ ಸಿ. ಬೈರೇಗೌಡ : ತೀರ್ಮಾನ ಮಾಡುವುದು ನೀವು. ವಿಸರ್ಜನೆ ಮಾಡಿದರೆ ಅದು ರಾಷ್ಟ್ರಪತ್ಯಕ್ಷರಿಗೆ ಹೋಗಬೇಕಾಗುತ್ತದೆ. ಉಪಾಧ್ಯಕ್ಷರು ಸಬೆ ಸೇರಿದರೆ ಬಂದು ಕುಳಿತುಕೊಳ್ಳುತ್ತಾರೆ. ಆದ್ದರಿಂದ ಅಧ್ಯಕ್ಷರಿಗೆ, ಉಪಾಧ್ಯಕ್ಷರಿಗೆ ಅದರ ಸಂಬಂಧ ಇಲ್ಲ, ವಿಸರ್ಜನೆ ಮಾಡಬೇಕೋ ಬೇಡವೋ ಎಂದು ಅದು ತಾವು ಮಾಡಬೇಕಾಗಿರುವ ಕೆಲಸ. ಅವರಿಗೆ ಹೇಗೆ ಗೊತ್ತಾಗುತ್ತದೆ? ಅವರಿಗೆ ಸಂಬಂಧ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಈ ವರ್ತಮಾನ ಮಾನ್ಯ ಉಪಾಧ್ಯಕ್ಷಣಿಯವರಿಗೆ ಗೊತ್ತಿರಬಹುದು. ಇಲ್ಲದಿದ್ದರೆ ಮಾನ್ಯ ಬೈರೇಗೌಡರಿಗೆ ಗೊತ್ತಿರಬಹುದು. ಏಕೆಂದರೆ ಬೈರೇಗೌಡರ ಹತ್ತಿರ ಬಹಳ ವರ್ತಮಾನಗಳು ಇರುತ್ತವೆ. ಒಂದು ವರ್ತಮಾನವನ್ನು ಬಿಟ್ಟಿದ್ದಾರೆ. ಏಕೆಂದರೆ ದೂರದರ್ಶನವಾಗಲೀ, ಆಲ್ ಇಂಡಿಯಾ ರೇಡಿಯೋ ಆಗಲೀ, He is a power centre ಆದುದರಿಂದ ವರ್ತಮಾನ ಅಲ್ಲಿಂದಲೇ ಬಂದರೆ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಈಗಾಗಲೆ ಪೋಲೀಸ್ ಫೋರ್ಸ್ ಸ್ಟೆಂತನ್ ಮಾಡುತ್ತಿದ್ದಾರೆಂದು ಹೇಳಿದ್ದಾರೆ, ಬಹಳ ಸಂತೋಷ. ಮಾಡಬೇಕು. ಇವತ್ತು ಪೋಲೀಸ್ ಫೋರ್ಸ್ ಇನ್‌ಎಫಿಶಿಯೆಂಟ್ ಆಗಿದೆ. ಇವತ್ತು ಅವರಲ್ಲಿ ಲೇಟೆಸ್ಟ್ ಆರ್ಮ್ಸ್ ಇಲ್ಲ. ಅವರಲ್ಲಿ ಕೆಲವರಿಗೆ ಹೌಸಿಂಗ್ ಪ್ರಾಬ್ಲಮ್ಸ್ ಇದೆ. ಇವರಲ್ಲಿ ಸ್ಯಾಲರಿ ಕಡಿಮೆ ಇರುವುದರಿಂದ ಜೀವನ ನಡೆಸುವ ಪ್ರಾಬ್ಲಮ್ಸ್ ಇದೆ. ಆ ಸಮಸ್ಯೆಗಳನ್ನು ಪರಿಹರಿಸಿ ಇವತ್ತು ಮುಖ್ಯವಾಗಿ ಪೋಲೀಸ್ ಫೋರ್ಸ್‌ನಲ್ಲಿ ಏನು ಮಾರಲ್ ಹೋಗಿದೆ ಅದನ್ನು ವಾಪಾಸ್ ತರುವುದಕ್ಕೆ ಪ್ರಯತ್ನ ಮಾಡಿ. ಬೆಂಗಳೂರು ಒಂದು ಕಾಲದಲ್ಲಿ ಚಾಕು ಚೂರಿ ಸೆಂಟರ್ ಆಗಿತ್ತು ನಮ್ಮ ಸರ್ಕಾರ ಇದ್ದಾಗ ಇದನ್ನು ನಾವು ಕಂಟ್ರೋಲ್ ಮಾಡಿದೆವು. ಆದರೆ ಈಗ ಪುನಃ ಇದು ನಡೆಯುತ್ತಾ ಇದೆ. ಪುನಃ ದರೋಡೆಗಳು, ಚಾಕು ಚೂರಿ ಪ್ರಯೋಗಳು ನಡೆಯುತ್ತಿವೆ. ಇವತ್ತು ಪೋಲೀಸ್ ಸ್ಟೇಷನ್‌ಗಳನ್ನು ಹೆಚ್ಚು ಮಾಡುವುದರಿಂದ ಹೆಚ್ಚು ಪ್ರಯೋಜನ ಆಗುವುತಕ್ಕಿಂತ ಪೋಲೀಸ್ ಡಿಪಾರ್ಟ್‌ಮೆಂಟ್‌ನಲ್ಲಿ ಮಾರಲ್ ತರುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಇವತ್ತು ತಾವು ಆಪರೇಷನ್ ಬ್ಲಾಕ್ ಬೋರ್ಡ್ ಬಗ್ಗೆ ಹೇಳಿದ್ದೀರಿ. ಇದು ಸ್ಟೇಟ್ ಗೌರ್ನಮೆಂಟ್ ಸ್ಕೀಮ್ ಅಲ್ಲ. ಇದನ್ನು ಇಡೀ ರಾಜ್ಯದಲ್ಲಿ ವಿಸ್ತರಣೆ ಮಾಡುತ್ತೇವೆಂದು ಹೇಳಿದ್ದೀರಿ. ಇದು ಕೇಂದ್ರ ಸರ್ಕಾರದ ಯೋಜನೆ. ಇದನ್ನು ನೀವು ವಿಸ್ತರಣೆ ಮಾಡುವ ಅಗತ್ಯ ಇಲ್ಲ. ಇದನ್ನು ಕೇಂದ್ರ ಸರ್ಕಾರ ವಿಸ್ತರಣೆ ಮಾಡುತ್ತದೆ. ನಿಮ್ಮ ಅಚೀವ್‌ಮೆಂಟ್ ಏನು? ನಾನು ಮಾನ್ಯ ಶಿಕ್ಷಣ ಸಚಿವರನ್ನು ಕೇಳುತ್ತೇನೆ. ವಿಶ್ವಬ್ಯಾಂಕಿನ ನೆರವಿನಿಂದ ತಾವು ಸರ್ಕಾರಿ ಪಾಲಿಟೆಕ್ನಿಕ್‌ಗಳಿಗೆ ಸಹಾಯ ಮಾಡುತ್ತೀದ್ದೀರಿ. ಇವತ್ತು ನಾನು ಎಲ್ಲಾ ಪ್ರೈವೇಟ್ ಪಾಲಿಟೆಕ್ನಿಕ್‌ಗಳಿಗೆ ಸಹಾಯ ಮಾಡಿ ಎಂದು ಹೇಳುತ್ತಿಲ್ಲ. ಇವತ್ತು ಬ್ಯಾಕ್‌ವರ್ಡ್ ಏರಿಯಾದಲ್ಲಿ ಯಾರು ಪ್ರೈವೇಟ್ ಪಾಲಿಟೆಕ್ನಿಕ್ ನಡೆಸುತ್ತಿದ್ದಾರೆ, ನಿಜವಾಗಿ ಯಾರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ ಅವರಿಗೂ ಸ್ವಲ್ಪ ಸಹಾಯ ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ಏಕೆಂದರೆ ಎಲ್ಲಾ ಕಡೆ ಸರ್ಕಾರ ಪಾಲಿಟೆಕ್ನಿಕ್‌ಗಳನ್ನು ಶುರು ಮಾಡುವುದಕ್ಕಾಗುವುದಿಲ್ಲ. ಎಲ್ಲಾ ಕಡೆ ಪಾಲಿಟೆಕ್ನಿಕ್‌ಗಳನ್ನು ಮಾಡಬೇಕು ಎಂದರೆ ಸಾಕಷ್ಟು ಓವರ್ ಹೆಡ್ ಛಾರ್ಜಸ್, ಎಕ್ಸ್‌ಪೆಂಡೀಚರ್ ಆಗುತ್ತದೆ. ಯಾರು ಹಿಂದುಳಿದ ಭಾಗದಲ್ಲಿ ಪ್ರಾರಂಭ ಮಾಡಿದ್ದಾರೆ ಅಲ್ಲಿ ಹಿಂದುಳಿದ ಶಾಲಾ ವಿದ್ಯಾರ್ಥಿಗಳಿಗೆ ಸಹಾಯ ಮಾಡುವದಕ್ಕೆ ಸರ್ಕಾರ ಪ್ರೈವೇಟ್ ಪಾಲಿಟೆಕ್ನಿಕ್‌ಗಳಿಗೂ ಕೂಡಾ ವಿಶ್ವಬ್ಯಾಂಕ್ ನೆರವಿನಿಂದ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಮಾನ್ಯ ಮುಖ್ಯಮಂತ್ರಿಯವರು ಹಿಂದೆ ಕೃಷಿ ಮಂತ್ರಿಗಾಳಾಗಿದ್ದಾಗ ಶಿವಮೊಗ್ಗ ಮತ್ತು ಬಿಜಾಪುರದಲ್ಲಿ ಅಗ್ರಿಕಲ್ಚರ್ ಕಾಲೇಜ್ ಪ್ರಾರಂಭ ಮಾಡಿದರು. ನಾನು ಒಂದು ಸಲಹೆ ಕೊಡುತ್ತೇನೆ. ಇದರಿಂದ ನನಗೆ ಲಾಭ ಆಗುವುದಿಲ್ಲ, ನಮ್ಮ ಗೌರ್ನಮೆಂಟ್ ಇದ್ದಾಗ ನಾವು ಒಂದು ಸ್ಕೀಮ್ ಹಾಕಿದ್ದೆವು. ಅಗ್ರಿಕಲ್ಚರಲ್ ಪಾಲಿಟೆಕ್ನಿಕ್‌ಗಳನ್ನು ಶುರು ಮಾಡಿ ಎಂದು ನಾನು ಹೇಳಿದ್ದೆ. ಇದರಿಂದ ಹಳ್ಳಿಗಳ ರೈತ ಹುಡುಗರು ಪವರ್ ಟಿಲ್ಲರ್, ಟ್ರಾಕ್ಟರ್ ಹಾಗೂ ಇತರ ಮಿಷನರಿ ಬಗ್ಗೆ ಕಲಿಯಲಿಕ್ಕೆ ಸಹಾಯವಾಗುತ್ತದೆ. ಆ ದೃಷ್ಟಿಯಿಂದ ಸರ್ಕಾರ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ರೂರಲ್ ಇಂಡಸ್ಟ್ರಿಯ ಲೈಸೆನ್ಸ್, ಕಾಟೇಜ್ ಇಂಡಸ್ಟ್ರಿ ಬಗ್ಗೆ ಸಾಕಷ್ಟು ಹೇಳಿದ್ದಾರೆ. ಇಡೀ ದೇಶದಲ್ಲೇ ಇಲ್ಲ, ಅಂತಹ ಒಳ್ಳೆಯ ಕಾಟೇಜ್ ಇಂಡಸ್ಟ್ರಿ ಸ್ಟಾರ್ಟ್

ಮಾಡುತ್ತೇವೆ ಎಂದಿದ್ದೀರಿ, ಬಹಳ ಸಂತೋಷ ಮಾಡಿ. ಆದರೆ ಯಾವ ರೀತಿ ಮಾಡುತ್ತೀರಿ, ಯಾವ ಪ್ರಕಾರ ಮಾಡುತ್ತೀರಿ ಎಂದು ಅದರಲ್ಲಿ ಇಲ್ಲ. ಯಾವ ದೇಶದಲ್ಲೂ ಇಲ್ಲ ಅಂತಹದ್ದು ಶುರು ಮಾಡುತ್ತೇವೆಂದು ಹೇಳಿದ್ದೀರಿ. ಇದಕ್ಕೆ ಯಾರದೂ ತಕರಾರು ಇಲ್ಲ. ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ಹಿಂದುಳಿದ ಪ್ರದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗಾವಕಾಶ ಮಾಡಬೇಕಾದರೆ, ಕೈಗಾರಿಕೆಗಳನ್ನು ಹಿಂದುಳಿದ ಪ್ರದೇಶದಲ್ಲಿ ಶುರು ಮಾಡಬೇಕು. ಅದರಲ್ಲೂ ಕಾಟೇಜ್ ಇಂಡಸ್ಟ್ರೀಸ್‌ಗೆ ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕಾಗಿದೆ. ವೀವರ್ಸ್‌ಗೆ, ಮಿಲ್ ವರ್ಕರ್ಸ್‌ಗೆ ಹೆಚ್ಚಿನ ಉತ್ತೇಜನ ಕೊಡಬೇಕು. ಇದನ್ನು ನಾನು ಒಪ್ಪುತ್ತೇನೆ. ಇದಕ್ಕಾಗಿ ಇನ್‌ಫ್ರಾಸ್ಟ್ರಕ್ಚರ್ ಏನು ಮಾಡಿದ್ದೀರಿ, ಆ ಇನ್ ಫ್ರಾಸ್ಟ್ರಕ್ಚರ್‌ಗೆ ಹಣ ಎಷ್ಟು ಇಟ್ಟಿದ್ದೀರಿ. ಇದರ ಬಗ್ಗೆ ಏನೇನೂ ಹೇಳಿಲ್ಲ. ಇದರ ಬಗ್ಗೆ ಬಡ್ಜೆಟ್‌ನಲ್ಲೂ ಕೂಡಾ ಏನೇನೂ ಕಾಣಿಸುತ್ತಾ ಇಲ್ಲ. ಇಡೀ ದೇಶದಲ್ಲಿಯೇ ಇಲ್ಲದಂತಹ ಸ್ಕೀಮ್ ಹಾಕುತ್ತೇವೆಂದು ಭಾಷಣದಲ್ಲಿ ಹೇಳಿದಿರೇ ವಿನಃ ಆ ಸ್ಕೀಮ್ ಇಂಪ್ಲಿಮೆಂಟ್ ಮಾಡುವುದಕ್ಕೆ ಏನು ಮಾಡುತ್ತೀರೆಂದು ಬಡ್ಜೆಟ್‌ನಲ್ಲೂ ಕೂಡಾ ಏನೂ ಕಾಣುತ್ತಾ ಇಲ್ಲ.

ಇವತ್ತು ವೀವರ್ಸ್‌ಗೆ ಇನ್‌ಷ್ಯೂರೆನ್ಸ್ ಮಾಡುತ್ತೇವೆಂದು ಹೇಳಿದ್ದೀರಿ, ಇದು ಹಳೆಯ ಮಾತು. ನಾನು ಸಣ್ಣ ಕೈಗಾರಿಕಾ ಮಂತ್ರಿಯಾಗಿದ್ದಾಗ ಇದನ್ನು ಇಂಟ್ರಡ್ಯೂಸ್ ಮಾಡಿದ್ದೆ. ರಾಜ್ಯದಲ್ಲಿ ಕೈಗಾರಿಕೆ ನಿಜವಾಗಿ ಬೆಳೆಯಬೇಕೆಂಬ ಇಚ್ಛೆ ತಮಗೆ ಇದ್ದರೆ ಸಂಪೂರ್ಣವಾದ ರಕ್ಷಣೆಯನ್ನು ನೀವು ಕೈಗಾರಿಕೆಗಳಿಗೆ ಕೊಡಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಇಂತಹ ಸಣ್ಣ ಕೈಗಾರಿಕೆಗಳು ಏನು ಪ್ರೊಡ್ಯೂಸ್ ಮಾಡುತ್ತಿದೆ ಅದನ್ನು ಸರಕಾರದ ಅಂಡರ್ ಟೇಕಿಂಗ್‌ಗಳಾಗಲೀ, ಇಲ್ಲವೇ ಸರಕಾರವಾಗಲೀ ಖರೀದಿ ಮಾಡುವುದಕ್ಕೆ ತಯಾರಿಲ್ಲ. ಮೈಸೂರು ಲ್ಯಾಕ್ ಅಂಡ್ ಪೇಂಟ್ಸ್ ಪೇಂಟ್ ತಯಾರು ಮಾಡುತ್ತದೆ. ಅದನ್ನು ಲೋಕೋಪಯೋಗಿ ಇಲಾಖೆಯವರು ಖರೀದಿ ಮಾಡುವುದಿಲ್ಲ. ಕಾರಣ, ವೆಸ್ಟೆಡ್ ಇಂಟರೆಸ್ಟ್ ಇದೆ. ಅಲ್ಲಿ ತೆಗೆದುಕೊಂಡರೆ ಕಮಿಷನ್ ಸಿಗುವುದಿಲ್ಲ. ಅಧಿಕಾರಿಗಳು ಹೊರಗಿನಿಂದ ತರುತ್ತಾರೆ. ಹೀಗಾಗಿ ತೊಂದರೆಯಾಗುತ್ತದೆ. ನಾವು ಅಲ್ಲಿದ್ದಾಗ ಅದನ್ನೇ ಮಾಡಿದ್ದೆವು. About 410 items in small scale sectors. we reserved. ಇಷ್ಟು ಐಟಮ್ಸ್‌ನ್ನು ಸಣ್ಣ ಕೈಗಾರಿಕೆಗಳಿಂದ ತೆಗೆದುಕೊಳ್ಳಬೇಕೆಂದು ಆದೇಶ ಮಾಡಿದ್ದೆವು. ಸರಕಾರಿ ಇಲಾಖೆಗಳು ಇರಬಹುದು, ಪಬ್ಲಿಕ್ ಅಂಡರ್‌ಟೇಕಿಂಗ್‌ಗಳು ಇರಬಹುದು, ಅವರು ಸಣ್ಣ ಕೈಗಾರಿಕೆಗಳಿಂದ ತೆಗೆದುಕೊಳ್ಳಬೇಕು, ಒಂದು ವೇಳೆ ಸಣ್ಣ ಕೈಗಾರಿಕೆಗಳಿಗೆ ಸಪ್ಲೈ ಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೆ ರಾಜ್ಯದಲ್ಲಿರತಕ್ಕಂತಹ ಮೀಡಿಯಂ ಮತ್ತು ಲಾರ್ಜ್ ಇಂಡಸ್ಟ್ರಿಗಳಿಂದ ತೆಗೆದುಕೊಳ್ಳಬೇಕೆಂದು ಆದೇಶ ಮಾಡಿದ್ದೇವು. Otherwise Officers are held responsible. ಆದರೆ ಅದನ್ನು ಸರಿಯಾಗಿ ಜಾರಿಗೆ ತರುತ್ತಿಲ್ಲ. Small Industries plight has become very bad. ಇವತ್ತು ನೂರು ಕೈಗಾರಿಕೆಗಳು ಇದ್ದರೆ ಅವುಗಳಲ್ಲಿ 80 ಸಿಕ್ ಇಂಡಸ್ಟ್ರೀಗಳಾಗಿರುತ್ತವೆ. ಇವತ್ತು ಕಾಟೇಜ್ ಇಂಡಸ್ಟ್ರೀಸ್ ಬಗ್ಗೆ ಹಾಗೂ ಇನ್ನಿತರ ಸಣ್ಣ ಕೈಗಾರಿಕೆ ಬಗ್ಗೆ ಸರಿಯಾದ ಇನ್‌ಫ್ರಸ್ಟ್ರಕ್ಚರ್‌ನ್ನು ನೀವು ಡೆವಲಪ್‌ಮಾಡಬೇಕಾಗುತ್ತದೆ.

ನಮ್ಮ ಆರ್ಥಿಕ ಪರಿಸ್ಥಿತಿ ಬಹಳ ಸುಧಾರಿಸಿದೆ ಎಂದು ತಾವು ಹೇಳಿದ್ದೀರಿ. ಆ ರೀತಿ ಹೇಳಿದರೂ ಕೂಡ ಸಬ್ಸಿಡಿ ರಿಲೀಸ್ ಆಗಿಲ್ಲ. ಇನ್ನೂ 25-30 ಕೋಟಿ ರೂಪಾಯಿಗಳ ಸಬ್ಸಿಡಿಯನ್ನು ಕೈಗಾರಿಕೆಗಳಿಗೆ ಕೊಡಬೇಕಾಗಿದೆ. ಬ್ಯಾಕ್‌ವರ್ಡ್ ಏರಿಯಾದಲ್ಲಿರತಕ್ಕ ಸಣ್ಣ ಕೈಗಾರಿಕೆಗಳಿಗೆ ಇನ್‌ಸೆಂಟೀವ್ ಅನ್ನು ಮತ್ತು ಎನ್‌ಕರೇಜ್‌ಮೆಂಟ್ ಅನ್ನು ಕೊಟ್ಟು ಕಾಟೇಜ್ ಇಂಡಸ್ಟ್ರೀಸ್ ಅನ್ನು ಡೆವಲಪ್ ಮಾಡುವುದಕ್ಕೆ ಸರಕಾರದಿಂದ ಪ್ರಯತ್ನ ಆಗಬೇಕಾಗಿದೆ. ಇನ್ನು ಬೀಡಿ ಇಂಡಸ್ಟ್ರೀಸ್ ಬಗ್ಗೆ ಹೇಳುವುದಾರೆ, ಅದರ ಪರಿಸ್ಥಿತಿ ತುಂಬಾ ಗಂಭೀರವಾಗಿದೆ. ಬೀಡಿ ಮಾಡುವುದಕ್ಕೆ ಕರ್ನಾಟಕದಲ್ಲಿ ಟೆಂಡರ್

ಲೀವ್ಸ್ ಸಿಗುವುದಿಲ್ಲ. ಅದು ಮಧ್ಯಪ್ರದೇಶದಿಂದ ಬರುತ್ತದೆ. 63 lakh standard bags of tender leaves from Mandhya pradesh. ಮಧ್ಯಪ್ರದೇಶದಲ್ಲಿ ತಯಾರಾಗುತ್ತಿದೆ. ಆದರೆ ಕಳೆದ ವರ್ಷ ಹೆಚ್ಚಿನ ಮಳೆಯಾಗಿ ಈ ಬೆಳೆ ಹಾಳಾಗಿ ಲೀವ್ಸ್ ಮೇಲೂ ಕೂಡ ಸಾಕಷ್ಟು ಪರಿಣಾಮವಾಗಿದೆ. ಮಾನ್ಯ ಶಿಕ್ಷಣ ಸಚಿವರು ಈ ಕಡೆ ಗಮನಹರಿಸಬೇಕು ಇದು ನಿಮ್ಮ ಜಿಲ್ಲೆಗೂ ಕೂಡ ಸಂಬಂಧಪಟ್ಟಿದ್ದಾಗಿದೆ. ಮುಂದಿನ ವರ್ಷ ಈ ಟೆಂಡರ್ ಲೀವ್ಸ್ ಬರದಿದ್ದರೆ ಈ ಬೀಡಿ ಕೈಗಾರಿಕೆಯಲ್ಲಿ 6 ಲಕ್ಷ ಜನ ಏನು ಕೆಲಸ ಮಾಡುತ್ತಿದ್ದಾರೆ ಅವರಿಗೆ ಬಹಳ ತೊಂದರೆಯಾಗುತ್ತದೆ. ಇವತ್ತು ಇಡೀ ರಾಜ್ಯದಲ್ಲಿ ಟೆಂಡರ್ ಲೀವ್ಸ್ ಸಿಗುತಿಲ್ಲ.

ಮಧ್ಯಪ್ರದೇಶದಿಂದ ತರಬೇಕಾಗಿದೆ. About 15 Lakh standard bags of tender leaves are required. ತಾವು ಕೇಂದ್ರ ಸರಕಾರದ ಮೇಲೆ ಮತ್ತು ಮಧ್ಯಪ್ರದೇಶದ ಸರ್ಕಾರದ ಮೇಲೆ ನಿಮ್ಮ ಇನ್‌ಫ್ಲುಯೆನ್ಸ್ ಯೂಸ್ ಮಾಡಿ ನಮ್ಮ ರಾಜ್ಯದ ಮುಂದಿನ ವರ್ಷದ ರಿಕ್ವಯರ್‌ಮೆಂಟ್ ಏನು ಇದೆ, ಅದನ್ನು ತರಲಿಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. Otherwise the industry will become sick and six lakh people will be out of jobs. ಕಾಟೇಜ್ ಇಂಡಸ್ಟ್ರೀ ಇಂಪ್ರೂವ್ ಆಗಬೇಕಾದರೆ ಇದೂ ಕೂಡ ಚೆನ್ನಾಗಿ ನಡೆಯಬೇಕಾಗುತ್ತದೆ. ಅವರಿಗೆ ಸಹಾಯ ಮಾಡುವುದಕ್ಕೆ ಸರಕಾರಕ್ಕೆ ಬೇಕಾದಷ್ಟು ಅವಕಾಶ ಇದೆ. ಮನೆ ಕಟ್ಟಿಕೊಡಬಹುದು. ಕೇಂದ್ರ ಸರ್ಕಾರದ ಅನೇಕ ಸ್ಕೀಂಗಳಿವೆ. ಈ ಸ್ಕೀಂಗಳ ಬಗ್ಗೆ ರಾಜ್ಯಪಾಲರ ಭಾಷಣದಲ್ಲಾಗಲೀ ಬಡ್ಜೆಟ್ಟಿನಲ್ಲಾಗಲೀ ಹೇಳಿಲ್ಲ. ಈ ದೃಷ್ಟಿಯಿಂದ ಸರ್ಕಾರ ಪ್ರಯತ್ನ ಮಾಡಬೇಕು. ಇನ್ನು 60 ಸಾವಿರ ಪಂಪ್‌ಸೆಟ್ ಅನ್ನು ಎನ್‌ರ್ಜೈಸ್ ಮಾಡುತ್ತೇವೆಂದು ಹೇಳಿದ್ದಾರೆ. ಸಂತೋಷ. ಆದರೆ ಇವತ್ತು ಪರಿಸ್ಥಿತಿ ಏನಿದೆ ಎನ್ನುವುದನ್ನು ನಮ್ಮ ಶಾಸಕ ಮಿತ್ರರು ಹೇಳಬೇಕು. ಇವತ್ತು ನಮ್ಮಲ್ಲಿ ಕಂಡಕ್ಟರ್ಸ್ ಇಲ್ಲ, ವೈರ್ ಇಲ್ಲ, ಪೋಲ್ಸ್ ಇಲ್ಲ. ಇವುಗಳಿಲ್ಲದೆ ಯಾವ ಕೆಲಸವೂ ಕೂಡ ಆಗುತ್ತಿಲ್ಲ, ನಾವು ಅಧಿಕಾರದಲ್ಲಿದ್ದಾಗ ಒಂದು ಆದೇಶ ಕೊಟ್ಟಿದ್ದೆವು. ಯಾವುದೇ ವಿಲೇಜ್ ಪಂಚಾಯತಿಯಾಗಲೀ ಅಥವಾ ಮಂಡಲ ಪಂಚಾಯತಿಯಾಗಲೀ ಡಿಫಾಲ್ಟರ್ ಇದ್ದರೂ ಕೂಡ ಹರಿಜನ ಬಸದಿಗಳಿಗೆ, ಜನತಾ ಕಾಲೋನಿಗಳಿಗೆ ವಿದ್ಯುಚ್ಛಕ್ತಿ ಪೂರೈಸಬೇಕೆಂದು ಆದೇಶವನ್ನು ಕೊಟ್ಟಿದ್ದೆವು. ಈಗ ನೀವು ಏನು ಮಾಡಿದಿರಿ ಅಂದರೆ ಪಂಚಾಯತಿ ಪವರ್ ಅರಿಯರ್ಸ್‌ನಲ್ಲಿ ಡಿಫಾಲ್ಟರ್ ಇದ್ದರೆ ಅಲ್ಲಿರುವ ಹರಿಜನ ಬಸದಿಗಳಿಗೂ ಕೂಡ ಎಲೆಕ್ಟ್ರಿಫೈ ಮಾಡಬಾರದು ಎಂದು ತಾವು ಆದೇಶ ಕೊಟ್ಟಿದ್ದೀರಿ. ಸರಕಾರ ಇದನ್ನು ಪರಿಶೀಲಸಬೇಕು. ಇವತ್ತು ಮಂಡಲಗಳು ಯಾವ ಪರಿಸ್ಥಿತಿಯಲ್ಲಿವೆ ಎನ್ನುವುದನ್ನು ತಮಗೆ ಗೊತ್ತು. ಮಂಡಲದಲ್ಲಿ ಎಲೆಕ್ಟ್ರಿಸಿಟಿ ಪೇಮೆಂಟ್ ಡ್ಯೂಸ್ ಇದ್ದು ಅದನ್ನು ತುಂಬದಿದ್ದರೆ ಹರಿಜನ ಕಾಲೋನಿಗಳಿಗೆ ಜನತಾ ಮನೆಗಳಿಗೆ ಲೈಟ್ ಕೊಡಲಿಲ್ಲವೆಂದರೆ ಬಹಳ ತೊಂದರೆಯಾಗುತ್ತದೆ. ಆದುದರಿಂದ ಇದರ ಬಗ್ಗೆ ಗಮನ ಸರ್ಕಾರ ಕೊಡಬೇಕು.

ಮತ್ತೊಂದು ಆದೇಶವನ್ನು ಕೊಡಿ. ಇವತ್ತು ನನಗೆ ಕಾರವಾರದಿಂದ ಫೋನ್ ಬಂತು. ಮಂಡಲ ಪಂಚಾಯತಿಗಳಿಗೆ ಹೋಗುವ ಡೆವಲಪ್‌ಮೆಂಟ್ಸ್ ಗ್ರಾಂಟ್ಸ್ ಏನಿದೆ, ಅದನ್ನು ನೀವು ಒಂದು ವೇಳೆ ಕೆಇಬಿಗೆ ಕೊಡುವುದು ಇದ್ದರೆ ಕೆಇಬಿಗೆ ಜಮಾ ಮಾಡಿರಿಯೆಂದು ಹೇಳಿದ್ದಾರೆ. ಹೀಗಾದರೆ ಯಾವ ಪ್ರಕಾರ ಮಂಡಲಪಂಚಾಯತಿಗಳು ಕೆಲಸ ಮಾಡಬೇಕು? ಯಾವ ಪ್ರಕಾರ ಮಂಡಲಪಂಚಾಯತಿಗಳು ಅಭಿವೃದ್ಧಿಯಾಗಬೇಕು? ಏಕೆಂದರೆ ಕಳೆದ ಮುಂಗಡಪತ್ರದಲ್ಲಿ ಒಂದು ಹೊಸ ಕೆಲಸವಿಲ್ಲ. ಈ ಸಾಲಿನ ಮುಂಗಡಪತ್ರದಲ್ಲಿ ಹೊಸ ಕೆಲಸಗಳು ನನಗೆ ಕಾಣಿಸುವುದಿಲ್ಲ. ಕೇವಲ ಪೊಳ್ಳು ಘೋಷಣೆ ಮಾಡುತ್ತೇವೆ, ಅಂದರೆ ಬರೀ ಭಾಷಣ ಮಾಡಿಕೊಂಡು ಹೋಗಿರಿ. ನಿಜವಾಗಿಯೂ ಗ್ರಾಮೀಣಾಭಿವೃದ್ಧಿಯಾಗಬೇಕು, ರೈತರ ಏಳಿಗೆಯಾಗಬೇಕು, ಹಿಂದುಳಿದವರ

ಅಭಿವೃದ್ಧಿಯಾಗಬೇಕು, ಕೂಲಿಕಾರರ ಮತ್ತು ಶ್ರಮಿಕರ ಅಭಿವೃದ್ಧಿಯಾಗಬೇಕಾದರೆ ನಾನು ನಿಜವಾಗಿ ಹೇಳುತ್ತೇನೆ, ಇದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ತಾವು ಮಾಡಬೇಕಾಗುತ್ತದೆ. ಇವತ್ತು ಇಲ್ಲಿ ನಮ್ಮ ಅಗ್ರಿಕಲ್ಚರ್ ಮಿನಿಸ್ಟರ್ ಇಲ್ಲ. ನಮ್ಮ ಭಾಗಕ್ಕೆ ಒಂದು ಕೃಷಿ ವಿಶ್ವವಿದ್ಯಾಲಯವನ್ನು ಮಾಡಿ ಕೊಟ್ಟಿದ್ದಾರೆ. ಬಾಂಬೆ ಕರ್ನಾಟಕ ಮತ್ತು ಹೈದರಾಬಾದ್-ಕರ್ನಾಟಕ ಭಾಗಕ್ಕೆ ಬರಿ ವಿಶ್ವವಿದ್ಯಾನಿಲಯವನ್ನು ಮಾಡಿಕೊಟ್ಟಿದ್ದಾರೆ. ಆ ಯೂನಿವರ್ಸಿಟಿಗೆ ಏನು ಫಂಡ್ಸ್ ರೀಲಿಸ್ ಆಗಬೇಕು ಅದು ಆಗುತ್ತಿಲ್ಲ. ಬೆಳಗಾವಿಯಲ್ಲಿ ವೆಜಿಟೇಬಲ್ ರೀಸರ್ಚ್ ಸೆಂಟರ್ ಮಾಡಬೇಕೆಂದು ಲ್ಯಾಂಡ್ ಅಕ್ವೈರ್ ಮಾಡಿ ಎಂದು ನಮ್ಮ ಸರ್ಕಾರ ಆದೇಶ ಕೊಟ್ಟಿದ್ದೂ, ಅದು ಇವತ್ತಿನವರೆಗೂ ಆಗಿಲ್ಲ. ನಮ್ಮ ಜಿಲ್ಲೆಯಲ್ಲಿ ಹಾರ್ಟಿಕಲ್ಚರ್ ರೀಸರ್ಚ್ ಸೆಂಟರ್ ಮಾಡಬೇಕೆಂದು ಮಾಡಿದ್ದೆವು, ಆ ಕೆಲಸವೂ ಇವತ್ತು ಆಗುತ್ತಿಲ್ಲ. ಕಳೆದ ಎರಡು ಮೂರು ವರ್ಷಗಳಿಂದ ಎಲ್ಲಾ ಕೆಲಸಗಳು ಸ್ಟ್ಯಾಂಡ್‌ಸ್ಟಿಲ್ ಆಗಿವೆ. ನಮಗೆ ಆಶ್ಚರ್ಯವಾಗುತ್ತದೆ, ನಿಮ್ಮ ಶಾಸಕರ ಪ್ರಭಾವದಿಂದ ಇವೆಲ್ಲಾ ಆಗುತ್ತಿವೆಯೆ? ನಾವು ಕರ್ನಾಟಕ ರಾಜ್ಯದಿಂದ ಹೊರಗೆ ಇದ್ದೇವೆಯೆ?

ಶ್ರೀ ಕೆ. ಕುಶಾಲ : ತಾವು ಆರು ವರ್ಷಗಳ ಕಾಲ ಆಡಳಿತ ಮಾಡುತ್ತಿರುವಾಗ, ಒಂದು ಕೆಲಸವನ್ನು ಸಹ ಮಾಡುತ್ತಿರಲಿಲ್ಲ. ಹರಿಜನ ಘಟಕಗಳಿಗೆ ಒಂದು ಕೆಲಸ ಕೂಡ ಮಾಡುತ್ತಿರಲಿಲ್ಲ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಅದನ್ನಾದರೂ ಮಾಡುತ್ತಿದೆ ಹರಿಜನ ಘಟಕಗಳಲ್ಲಿ ನೀವು ಏನೂ ಕೆಲಸ ಮಾಡುತ್ತಿರಲಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ನಾನು ಏನು ಹೇಳುತ್ತಿದ್ದೇನೆಂದು ಅವರಿಗೆ ಗೊತ್ತಾಗಲಿಲ್ಲ. ನಾವು ಮಂಜೂರು ಮಾಡಿರುವ ಕೆಲಸಗಳು ಆಗಿಲ್ಲವೆಂದು ಹೇಳುತ್ತಿದ್ದೇನೆ. ಅವುಗಳೆಲ್ಲ ಶಿಥಿಲಗೊಂಡಿವೆಯೆಂದು ಹೇಳುತ್ತಿದ್ದೇನೆ.

ಶ್ರೀ ಕೆ. ಕುಶಾಲ : ನೀವು ಅಧಿಕಾರದಲ್ಲಿದ್ದ ಅವಧಿಯಲ್ಲಿ ವಿಶೇಷ ಘಟಕ ಯೋಜನೆ ಅಡಿಯಲ್ಲಿ ಏನೂ ಕೆಲಸ ಆಗಲಿಲ್ಲ, ಅದರ ಬಗ್ಗೆ ತಾವು ಹೇಳಿ.

ಶ್ರೀ ಆರ್.ವಿ. ದೇಶಪಾಂಡೆ : ಈಗ ಪವರ್ ಜನರೇಷನ್ ಬಗ್ಗೆ, ಇರಿಗೇಷನ್ ಬಗ್ಗೆ ಹೆಚ್ಚಿನ ಹಣವನ್ನು ಸರ್ಕಾರ ಕೊಟ್ಟಿದೆ, ಸಂತೋಷ ನಾನು ಅದನ್ನು ಸ್ವಾಗತ ಮಾಡುತ್ತೇನೆ. ಆದರೆ ಇವತ್ತು ಇರಿಗೇಷನ್‌ಗೆ ಹಣ ಕೊಡುವಾಗ, ಮಲೆನಾಡು ಜಿಲ್ಲೆಯ ಬಗ್ಗೆ ತಾವು ವಿಚಾರ ಮಾಡಬೇಕು. ಕಾವೇರಿ, ಕೃಷ್ಣ ಗೋದಾವರಿ ಬೇಸಿನ್‌ಗಳಿಗೆ ಹಣವನ್ನು ಕೊಡಿ, ಅದಕ್ಕೆ ನಮ್ಮದೇನೂ ತಕರಾರು ಇಲ್ಲ. ಯಾವ್ಯಾವ ರಿವರ್‌ಗಳಿವೆ ಅಲ್ಲಿಗೆಲ್ಲ ಹಣವನ್ನು ಕೊಡಿ. ಆದರೆ ನಮ್ಮ ಜಿಲ್ಲೆಯ ಪರಿಸ್ಥಿತಿ ಏನಿದೆ? ನಮ್ಮ ಕಡೆ ದೊಡ್ಡನೀರಾವರಿ ಯೋಜನೆಗಳು ಇಲ್ಲ. ಏತನೀರಾವರಿ ಯೋಜನೆಗಳನ್ನು ಮಾಡಬೇಕು. ನಾನು ಚಾಲೆಂಜ್ ಮಾಡುತ್ತಿದ್ದೇನೆ, ಕಳೆದ ಮೂರು ವರ್ಷಗಳಿಂದ ಒಂದು ಲಿಫ್ಟ್ ಇರಿಗೇಷನ್ ಸ್ಕೀಮ್‌ನ್ನು ಮಾಡಿದ್ದೀರಾ ಹೇಳಿ. ಮೂರು ವರ್ಷಗಳಿಂದ ಬಜೆಟ್‌ನಲ್ಲಿ ಸ್ಯಾಂಕ್ಷನ್ ಆಗಿದ್ದರೂ ಒಂದು ಕೆಲಸ ಸಹ ಆಗಿಲ್ಲ.

ಶ್ರೀ ಡಿ.ಎ. ಚಿನ್ನಪ್ಪ : ತಮ್ಮ ಆಡಳಿತದ ಆರು ವರ್ಷಗಳ ಕಾಲದಲ್ಲಿ 36 ರೂಪಾಯಿ ಚೆಕ್ ಡಿಸ್‌ಆನರ್ ಆಗಿ ಬೌನ್ಸ್ ಆಗಿದೆ. ಅಂತಹ ಪರಿಸ್ಥಿತಿ ಇರುವಾಗ ತಾವೇನೂ ಮಾಡಿದಿರಿ? ಇವತ್ತು ನಮಗೆ ಹೇಳುತ್ತಿದ್ದೀರಿ.

ಶ್ರೀ ಆರ್.ವಿ. ದೇಶಪಾಂಡೆ : ಮಂಜೂರಾಗಿರುವ ಕೆಲಸಗಳ ಬಗ್ಗೆ ನಾನು ಹೇಳುತ್ತಿದ್ದೇನೆ.

ಶ್ರೀ ಡಿ.ಎ. ಚಿನ್ನಪ್ಪ : ನೀವು ಕೆಲಸಗಳನ್ನು ಮಂಜೂರು ಮಾಡಿದಿರಿ, ಆದರೆ ಹಣವನ್ನು ಕೊಡಲಿಲ್ಲ. ನಮ್ಮ ಸರ್ಕಾರ ಭರವಸೆಗಳನ್ನು ಕೊಡುವುದಿಲ್ಲ, ಭರವಸೆಗಳನ್ನು ಕೊಟ್ಟರೆ ಅದನ್ನು ಈಡೇರಿಸುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ : ನಿಜವಾಗಿಯೂ ಮಲೆನಾಡಿನ ರೈತರಿಗೆ ಸಹಾಯ ಮಾಡಬೇಕೆಂಬ ಇಚ್ಛೆ ಇದ್ದರೆ ತಾವು ಲಿಫ್ಟ್ ಇರಿಗೇಷನ್ ಮತ್ತು ಮೈನರ್ ಇರಿಗೇಷನ್‌ಗೆ ಪ್ರಿಯಾರಿಟಿ ಕೊಡಬೇಕಾಗುತ್ತದೆ. ಎಷ್ಟೋ ಸ್ಕೀಮ್‌ಗಳು ಮಂಜೂರಾಗಿವೆ, ಕೆಲಸ ಶುರುವಾಗಿಲ್ಲ, ಅದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಮಲೆನಾಡಿನ ಡೆವಲಪ್‌ಮೆಂಟ್ ಬೋರ್ಡ್ ಎಂದು ಮಾಡಿದ್ದಾರೆ. ಬಹಳ ಸಂತೋಷ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಅದಕ್ಕೆ 10 ಕೋಟಿ ರೂಪಾಯಿ ಹಣದ ಪ್ರಾವಿಜನ್ ಮಾಡಿದ್ದಾರೆ, ಅದು ಸಾಲದು. ಮಾನ್ಯ ವೀರಪ್ಪಮೊಯಿಲಿಯವರು ಫೈನಾನ್ಸ್ ಮಿನಿಸ್ಟರ್ ಇದ್ದರೆ ನಮಗೆ 30-40 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದರೆಂಬ ವಿಶ್ವಾಸವಿತ್ತು. ಈಗ ಬಂಗಾರಪ್ಪನವರು ಫೈನಾನ್ಸ್ ಇಟ್ಟುಕೊಂಡಿದ್ದರೂ ಅವರು ಏತಕ್ಕೆ ಕೊಡುತ್ತಿಲ್ಲವೋ ನನಗೆ ಗೊತ್ತಿಲ್ಲ, ಅವರಿಗೆ ನಾನು ಶಿವಮೊಗ್ಗ ಜಿಲ್ಲೆಯವನು, ಹೇಗೆ ಮಾಡಬೇಕು ಎಂಬ ಭಯವಿರಬಹುದು. ಅದೂ ಒಂದು ಕಾರಣ ಇರಬಹುದು. ಆದರೆ ಇದಕ್ಕೆ ಪ್ರೊವಿಜನ್ ಮಾಡಿರುವುದು ಬಹಳ ಕಡಿಮೆ ಇದೆ. ಮಲೆನಾಡು ಅಭಿವೃದ್ಧಿ ಮಂಡಲಿಯನ್ನು ಮಾಡಿದ್ದೀರಿ, ಬಹಳ ಸಂತೋಷ.

ಈ ಕೆಲಸ ಹಿಂದೆಯೇ ಆಗಬೇಕಾಗಿತ್ತು. ತಾವು ಮಾಡಿದ್ದಕ್ಕೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಆದರೆ ಪ್ರಾವಿಶನ್ ಏನಿದೆ, ಅದನ್ನು ಹೆಚ್ಚು ಮಾಡಬೇಕಾಗುತ್ತದೆ. ನಿಜವಾಗಿ ಇದರ ಅಭಿವೃದ್ಧಿ ಆಗಬೇಕಾದರೆ ಕನಿಷ್ಟ 30-40 ಕೋಟಿ ರೂಪಾಯಿಗಳನ್ನು ಇಡಬೇಕಾಗಿತ್ತು. ಏಕೆಂದರೆ ಇದು ಬಹಳ ಹಿಂದುಳಿದ ಪ್ರದೇಶ. ಇದರ ವಿಸ್ತೀರ್ಣ ಬಹಳ ದೊಡ್ಡದು, ಭೌಗೋಳಿಕವಾಗಿ ವಿಸ್ತೀರ್ಣ ಬಹಳ ದೊಡ್ಡದು, ಹಾಗೆಯೇ ಸಮಸ್ಯೆ ಸಹ ಬಹಳ ದೊಡ್ಡದು. ಇಲ್ಲಿ ಒಂದು ಹಳ್ಳಿಯಲ್ಲಿ ಇನ್ನೂರು-ಮುನ್ನೂರು ಜನ ಇದ್ದರೆ, ಧಾರವಾಡ ಜಿಲ್ಲೆಯಲ್ಲಿ ಒಂದು ಹಳ್ಳಿಯಲ್ಲಿ 3-4 ಸಾವಿರ ಜನ ಇರುತ್ತಾರೆ. ಆ ಹಳ್ಳಿಯಲ್ಲಿ ಒಂದು ರಸ್ತೆ ಮಾಡಿದರೆ ನಾಲ್ಕೈದು ಸಾವಿರ ಜನರಿಗೆ ಖುಷಿಯಾಗುತ್ತದೆ. ಆದರೆ ಇಲ್ಲಿ ನಾವು ನಾಲ್ಕೈದು ಸಾವಿರ ಜನರಿಗೆ ಖುಷಿ ಮಾಡಬೇಕಾದರೆ 20 ರಸ್ತೆಗಳನ್ನು ಮಾಡಬೇಕು. ನಮ್ಮ ಸಮಸ್ಯೆಗಳು ಹೆಚ್ಚು ಮತ್ತು ನಮಗೆ ಬರುವ ಫಂಡ್ಸ್ ಬಹಳ ಕಡಿಮಿ. ಆದ್ದರಿಂದ ಹೆಚ್ಚಿನ ಗಮನವನ್ನು ಸರ್ಕಾರ ಈ ಭಾಗದ ಅಭಿವೃದ್ಧಿಗೆ ಕೊಡಬೇಕಾಗಿತ್ತು. ಇವತ್ತು ನಮ್ಮ ಕಮೀಷನ್ ಬಗ್ಗೆ ಹೇಳಿದ್ದಾರೆ. ಶ್ರೀ ಆರ್. ಹೆಚ್ ಗುಡವಾಲ ಕಮೀಷನ್ ನ್ಯಾಯಮೂರ್ತಿ ಚಿನ್ನಪ್ಪರೆಡ್ಡಿ ಅವರ ಅಧ್ಯಕ್ಷತೆಯ ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ನಗಳ ವರದಿಗಳು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಶ್ರೀ ವೀರೇಂದ್ರಪಾಟೀಲರು ಈ ಮಾತನ್ನು ಹಿಂದೆ ಹೇಳಿದ್ದಾರೆ. ಶ್ರೀ ಬಂಗಾರಪ್ಪನವರು ಮುಖ್ಯಮಂತ್ರಿಯಾದಾಗ ಇದೇ ಮಾತನ್ನು ಹೇಳಿದ್ದರು. ಮತ್ತು ಈವತ್ತು ಕೂಡ ಇದೇ ಮಾತನ್ನು ಹೇಳುತ್ತಿದ್ದೀರಿ. ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುವುದೇನೆಂದರೆ, 16ನೇ ತಾರೀಖು ಮಾನ್ಯ ಮುಖ್ಯ ಮಂತ್ರಿಗಳು ಇದಕ್ಕೆ ಉತ್ತರ ಕೊಡುವಾಗ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಈ ಎರಡು ಕಮೀಷನ್‌ಗಳ ವರದಿಗಳ ಮೇಲೆ ಯಾವಾಗ ನಿರ್ಣಯ ತೆಗೆದುಕೊಳ್ಳುತ್ತೀರಿ? ಎರಡು ತಿಂಗಳು, ಮೂರು ತಿಂಗಳು, ಇಲ್ಲವೇ ಆರು ತಿಂಗಳೊಳಗೆ ಇದನ್ನು ಮಾಡುತ್ತೀರಾ? ಇದರ ಬಗ್ಗೆ ಅವರು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಕೇವಲ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದರೆ ಅದು ಸಾಲದು. ಮಂಡಲ ಕಮೀಷನ್ ಬಗ್ಗೆ ಯಾವುದೇ ವಿಚಾರ ಇದರಲ್ಲಿ ಇಲ್ಲ, ಮಂಡಲ್ ಕಮೀಷನ್ ವರದಿಯನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಒಪ್ಪಿಕೊಳ್ಳುತ್ತಾರೋ ಇಲ್ಲವೊ? ಇದರ ಬಗ್ಗೆ ಏನೇನೂ ಇಲ್ಲ, ಏಕೆ? ಹಿಂದುಳಿದ ವರ್ಗದವರು ಮುಖ್ಯಮಂತ್ರಿಗಳಾಗಿದ್ದಾರೆ, ಕರ್ನಾಟಕ ರಾಜ್ಯದಲ್ಲಿ ಹಿಂದುಳಿದ ವರ್ಗದವರೆಲ್ಲರ ಕಲ್ಯಾಣ ಆಗುತ್ತದೆ ಎಂದು ಹೇಳುತ್ತಾ ಇದ್ದೀರಿ. Why the

government is silent on Mandal Commission? ಅಕ್ಸೆಪ್ಟ್ ಮಾಡುತ್ತೇವೆ ಎಂದಾದರೂ ಹೇಳಿ ಅಥವಾ ಅಕ್ಸೆಪ್ಟ್ ಮಾಡುವುದಿಲ್ಲ ಎಂದಾದರೂ ಹೇಳಿ.

ಆದ್ದರಿಂದ ಇವತ್ತು ಸರ್ಕಾರ ಈ ಎರಡು ಕಮೀಷನ್‌ಗಳ ವರದಿ ಬಗ್ಗೆ ಏನು ನಿರ್ಣಯ ತೆಗೆದುಕೊಳ್ಳುತ್ತದೆ ಎಂದು ನಾವು ಕಾತುರರಾಗಿ ಕಾಯುತ್ತಿದ್ದೇವೆ. ಆದಷ್ಟು ಬೇಗ ಮುಖ್ಯಮಂತ್ರಿಗಳು ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಈ ಸಮಸ್ಯೆಯಿಂದ ಬಹಳ ವರ್ಷಗಳಿಂದ ಕಡುಬಡವರಿಗೆ, ಹಿಂದುಳಿದ ವರ್ಗಗಳಿಗೆ ಏನು ಅನ್ಯಾಯವಾಗಿದೆ ಅದನ್ನು ಹೋಗಲಾಡಿಸಿ ಒಂದು ಸಮತೋಲನವನ್ನು ತರುವುದಕ್ಕೆ ಆದಷ್ಟು ಬೇಗ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ.

ಇನ್ನು ಹೌಸ್ ಸೈಟ್ಸ್ ಬಗ್ಗೆ ಹೇಳಿದರು. ಹೌಸ್ ಸೈಟ್ಸ್ ಬಗ್ಗೆ ಸಮೀಕ್ಷೆ ನಡೆಸಿದ್ದೇವೆ, ಸರ್ವೆ ಮಾಡಿದ್ದೇವೆ, ಮಾರ್ಚ್-ಜೂನ್‌ನಲ್ಲಿ ಇದು ಮುಗಿಯುತ್ತದೆ ಎಂದು ಹೇಳಿದ್ದಾರೆ. ಬಹಳ ಸಂತೋಷ. ಆದರೆ ನಮ್ಮ ನಿಮ್ಮ ಜಿಲ್ಲೆಗಳ ಪರಿಸ್ಥಿತಿ ಬೇರೆ ಇದೆ. ಜನರಿಗೆ ಸೈಟ್ಸ್ ಬೇಕು. ಆದರೆ ರೆವಿನ್ಯೂ ಲ್ಯಾಂಡ್ ಇಲ್ಲ. ಇವತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಒಂದು ಬೋರ್‌ವೆಲ್ ಡ್ರಿಲ್ ಮಾಡಬೇಕು ಎಂದರೆ ಲ್ಯಾಂಡ್ ಇಲ್ಲ. All is forest land. ಅಲ್ಲಿ ಗಿಡಮರಗಳಿಲ್ಲ, ರಿಕಾರ್ಡ್ ಆಫ್ ರೈಟ್‌ನಲ್ಲಿ ಫಾರೆಸ್ಟ್ ಲ್ಯಾಂಡ್ ಎಂದು ಇದೆ.

ಹೀಗಾಗಿ ಮಲೆನಾಡು ಜಿಲ್ಲೆಯಲ್ಲಿ ಎಲ್ಲಿ ರೆವಿನ್ಯೂ ಲ್ಯಾಂಡ್ ಅವೆಲೆಬಲ್ ಇಲ್ಲ, ಅಲ್ಲಿ ತಾವು ಒಂದುವೇಳೆ ಬೆನಿಫಿಶರೀಸ್‌ನ್ನು ಐಟಿಫೈ ಮಾಡಿದರೆ ಎಲ್ಲಿ ಗಿಡಮರ ಇಲ್ಲ, ಅಂತಹ ಫಾರೆಸ್ಟ ಲ್ಯಾಂಡ್‌ನ್ನೂ ಸಹಿತ ಐಡೆಂಟಿಫೌ ಮಾಡಬೇಕಾಗುತ್ತದೆ; not only for site distribution but also for the development of the district. ನಾವು ನಮ್ಮ ಜಿಲ್ಲೆಯಲ್ಲಿ ಮಾಡಿದ್ದೆವು. ಇವತ್ತು ನಮ್ಮ ಜಿಲ್ಲೆಯಲ್ಲಿ ಆ ಮಾಹಿತಿ ಇದೆ. ಆ ಪ್ರಕಾರದ ರಿಪೋರ್ಟ್ ಮಲೆನಾಡು ಏರಿಯಾದಲ್ಲಿ ತಯಾರಾಗಬೇಕಾಗಿದೆ,ತಯಾರಾದರೆ ನಮ್ಮ ಜನರಿಗೆ ಸೈಟ್ಸ್ ಕೊಡಬಹುದು. ಸೌತ್ ಕೆನರಾದಲ್ಲಿ ಹತ್ತು ಸಾವಿರ ಜನರಿಗೆ ಸೈಟುಗಳು ಬೇಕು ಎಂದರೆ ಭೂಮಿ ಎಲ್ಲಿದೆ? ಎಲ್ಲ ಅರಣ್ಯ ಭೂಮಿ ಇದೆ. ರೆವಿನ್ಯೂ ಲ್ಯಾಂಡ್ ಎಲ್ಲೂ ಇಲ್ಲ, ನಮ್ಮ ಕಡೆಯೂ ಇಲ್ಲ, ಶಿವಮೊಗ್ಗದ ಕೆಲವು ಭಾಗದಲ್ಲಿ ಇಲ್ಲ, ಚಿಕ್ಕಮಗಳೂರಿನಲ್ಲೂ ಇಲ್ಲ, ಇದು ಪೇಪರ್‌ನಲ್ಲಿ ಅಷ್ಟೇ ಉಳಿಯಬಾರದು. ಆದ್ದರಿಂದ ಇದಕ್ಕೆ ಕೇಂದ್ರ ಸರ್ಕಾರದ ಅನುಮತಿ ಬೇಕಾದರೆ ಅದನ್ನು ಪಡೆಯುವುದಕ್ಕೆ ರಾಜ್ಯ ಸರ್ಕಾರ ಪ್ರಯತ್ನ ಮಾಡಬೇಕಾಗಿದೆ. ಇವತ್ತು ನಮ್ಮ ಜಿಲ್ಲೆಯಲ್ಲಿ ಬಹಳ ಜ್ವಲಂತ ಸಮಸ್ಯೆ ಎಂದರೆ ಅತಿಕ್ರಮಣ ಸಮಸ್ಯೆ. 1978ಕ್ಕಿಂತ ಮುಂಚೆ ಕಡುಬಡವರು, ಕೃಷಿ ಕಾರ್ಮಿಕರು ಅರಣ್ಯ ಭೂಮಿಯನ್ನು ಅತಿಕ್ರಮಣ ಮಾಡಿದ್ದಾರೆ. ಈಗಾಗಲೇ ಅರಣ್ಯ ಭೂಮಿ ಕೃಷಿ ಭೂಮಿ ಆಗಿದೆ. ಆದರೆ 1978ರಿಂದ ಇವತ್ತಿನ ತನಕ ಈ ಸಮಸ್ಯೆಯನ್ನು ನಮಗೂ ಬಗೆಹರಿಸಲಿಕ್ಕೆ ಆಗಲಿಲ್ಲ, ಮತ್ತು ನಿಮಗೂ ಕೂಡ ಬಗೆಹರಿಸಲಿಕ್ಕೆ ಆಗಿಲಿಲ್ಲ, ಇದನ್ನು ನಾವು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಆದ್ದರಿಂದ ಯಾರು ಕಡುಬಡವರು, ದುರ್ಬಲ ವರ್ಗದವರು, ಪರಿಶಿಷ್ಟ ಜನಾಂಗದವರು ಈ ಭೂಮಿಯನ್ನು ಇವತ್ತು ಅತಿಕ್ರಮಣ ಮಾಡಿದ್ದಾರೆ, ಆ ಭೂಮಿಯನ್ನು ಸಕ್ರಮಗೊಳಿಸುವುದಕ್ಕೆ ಸರ್ಕಾರದಿಂದ ಪ್ರಯತ್ನ ಆಗಬೇಕಾಗಿದೆ.

ನಮ್ಮ ಸರ್ಕಾರ ಇದ್ದಾಗ ಪ್ರತಿಯೊಂದು ತಾಲ್ಲೂಕಿನಲ್ಲೂ ಡಿ.ಎಫ್.ಓ. ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿದ್ದೆವು. ಎಲ್ಲಿ ಯಾವುದು ತಕರಾರು ಇಲ್ಲವೋ, ಅರಣ್ಯ ಇಲಾಖೆಯು ಅಬ್ಜೆಕ್ಷನ್ ಮಾಡುವುದಿಲ್ಲವೋ ಆ ಎಲ್ಲಾ ಪ್ರಕರಣಗಳನ್ನೂ ಸೆಂಟ್ರಲ್ ಗವರ್ನಮೆಂಟಿಗೆ ಕಳುಹಿಸಲಿಕ್ಕೆ ಬೆಂಗಳೂರು ತನಕ ಬಂದು ಮುಟ್ಟಬೇಕು. ಅತಿಕ್ರಮಣವನ್ನು 1978ಕ್ಕೆ ಮುಂಚೆ ಮಾಡಿಲ್ಲ, 1978ರ ನಂತರ ಮಾಡಿದ್ದಾರೆ ಎಂಬ ಭಿನ್ನಾಭಿಪ್ರಾಯ

ಇತ್ತು, ಇದರ ಬಗ್ಗೆ ಕಮಿಟಿ ರಚನೆ ಆಗಿತ್ತು. ಆದರೆ ಇವತ್ತು ಯಾವುದೇ ಕೆಲಸ ಆಗಿಲ್ಲ. ಆದುದರಿಂದ ಈ ಭೂಮಿಯನ್ನು ಕಡು ಬಡವರಿಗೆ ಕೊಡುವುದಕ್ಕೆ ಸರ್ಕಾರದಿಂದ ಬೇಗನೆ ಕ್ರಮ ಆಗಬೇಕಾಗುತ್ತದೆ. ಅದೇ ಪ್ರಕಾರ ಯಾವ ಹಂಗಾಮಿ ಭೂಮಿ, ಯಾವ ಕೃಷಿ ಭೂಮಿ, ಕೃಷಿಯಿಂದ ಬಿಡುಗಡೆಯಾಯಿತು, ಪೇಪರ್ ರಿಲೀಸ್ ಮೇಲೆ,ಯಾರಿಗೆ ಪಟ್ಟಾಗಳನ್ನು ಕೊಟ್ಟಿದ್ದಾರೆ, ಅವರು 20-22 ವರ್ಷಗಳಿಂದ ಮಾಡುತ್ತಿದ್ದಾರೆ. ಇದು ಇನ್ನೂ ಮಂಜೂರಾಗಿಲ್ಲ. ಆದ್ದರಿಂದ ಅವರಿಗೆ ಬ್ಯಾಂಕ್‌ನಲ್ಲಿ ಸಾಲ ಸಿಕ್ಕುವುದಿಲ್ಲ, ಸರ್ಕಾರದ ಯಾವ ಲಾಭವೂ ಅವರಿಗೆ ಸಿಕ್ಕುವುದಿಲ್ಲ. ಆ ಕೆಲಸವೂ ಸಹ ಸರ್ಕಾರದಿಂದ ಆದಷ್ಟು ಬೇಗನೆ ಆಗಬೇಕಾಗುತ್ತದೆ. ಇವತ್ತು ಬೆಂಗಳೂರು ಅಭಿವೃದ್ಧಿ ಬಗ್ಗೆ ಬರೆದಿದ್ದೀರಿ. ನಮ್ಮ ಜಾರ್ಜ್ ಸಾಹೇಬರೂ ಇಲ್ಲಿಯೇ ಇದ್ದಾರೆ. ಒಂದುನೂರು ಕೋಟಿ ರೂಪಾಯಿಗಳನ್ನು ಕೇಂದ್ರಸರ್ಕಾರಕ್ಕೆ ಕೇಳುತ್ತೇವೆಂದು ಹೇಳಿದ್ದೀರಿ, ಸಂತೋಷ. ಇದೇ ಮಾತನ್ನು ಒಮ್ಮೆ ಅಂತೋನಿ ಸಾಹೇಬರು ಬಾಂಬೆ ನಗರವನ್ನು ಡೆವಲಪ್‌ಮೆಂಟ್ ಮಾಡಲಿಕ್ಕೆ ಮೂರು ನೂರು ಕೋಟಿ ಕೊಡುತ್ತೇವೆಂದು ಹೇಳಿದ್ದರು. ಆಗ ಶ್ರೀಮತಿ ಇಂದಿರಾಗಾಂಧಿಯವರು ಇದ್ದರು, ಅವರಿಗೂ ಕೊಡುವುದಕ್ಕಾಗಲಿಲ್ಲ. ನೀವೂ ಪ್ರಯತ್ನ ಮಾಡಿ. ನಾನು ಒಂದು ಸಲಹೆ ಮಾಡುತ್ತೇನೆ. ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯಿಂದ ಡೆವಲಪ್‌ಮೆಂಟ್ ಸಾಧ್ಯತೆ ಇಲ್ಲ, ಕಾರ್ಪೊರೇಷನ್‌ನವರಿಗೆ ಸಾಧ್ಯತೆ ಇಲ್ಲ, ಸರ್ಕಾರಕ್ಕೂ ಸಾಧ್ಯತೆ ಇಲ್ಲ. ಏಕೆಂದರೆ, ಆರ್ಥಿಕವಾದ ಕೆಲವು ಸಮಸ್ಯಗಳು ಇವೆ. ಕಾರ್ಪೊರೇಷನ್‌ನಲ್ಲಿ ಹಣ ಎಲ್ಲಿ ಬರುತ್ತದೆ, ನೀವು ಏನು ಗ್ರಾಂಟ್ಸ್ ಕೊಡುತ್ತೀರಿ ಅದೇ ಹಣ. ಬೇರೆ ಹಣ ಇಲ್ಲ, ಬಿ.ಡಿ.ಎ.ನಲ್ಲಿ ಹಣ ಇಲ್ಲ, ಸರ್ಕಾರದಲ್ಲೂ ಹಣ ಇಲ್ಲ, ಯಾವ ಪ್ರಮಾಣದಲ್ಲಿ ಬಿಡುಗಡೆ ಮಾಡಬೇಕೋ ಅಷ್ಟು ಪ್ರಮಾಣದಲ್ಲಿ ಹಣ ಇಲ್ಲ, ಇವತ್ತು ಬಿ.ಡಿ.ಎ. ಪೊಸಿಷನ್ ಏನಾಗಿದೆಯೆಂದರೆ, ಕಳೆದ ಮೂರು ವರ್ಷದಲ್ಲಿ ಒಂದು ಸೈಟ್ ಕೂಡ ಅಲಾಟ್ ಮಾಡಲಿಲ್ಲ.

Crores of rupees are lying with the BDA.

ಈ ನಾಡಿನ ಜನ ಬಹಳ ಒಳ್ಳೆಯವರು, ಬೆಂಗಳೂರಿನ ಜನ ಬಹಳ ಒಳ್ಳೆಯವರು. ಇವತ್ತಿನವರೆಗೂ on cheating, they did not drag you on to the Cort. Huge amounts are lying with the BDA. ಹೀಗಾಗಿ ಬಿ.ಡಿ.ಎ. ಇವತ್ತು ಸಾರ್ವಜನಿಕರ ಹಣದಲ್ಲಿ ನಡೆಯುತ್ತಿದೆ. ಅದಕ್ಕೋಸ್ಕರ ನಾನು ಸಲಹೆ ಮಾಡುತ್ತಿದ್ದೇನೆ. ಬೆಂಗಳೂರಿನಲ್ಲಿ ಫ್ಲೈ ಓವರ್‌ಗಳನ್ನು ಮಾಡುತ್ತೇವೆಂದು ಹೇಳಿದ್ದೀರಿ. ಬಹಳ ಸಂತೋಷ. ಇವತ್ತು ಬೆಂಗಳೂರು ಬೆಳೆಯುತ್ತಿದೆ, ಜನಸಂಖ್ಯೆ ಬೆಳೆಯುತ್ತಿದೆ. ಈ ರೀತಿ ಬೆಳೆಯುತ್ತಿರುವ ನಗರಕ್ಕೆ ಫ್ಲೈ ಓವರ್‌ಗಳು ಬೇಕು, ರಸ್ತೆಗಳು ಬೇಕು, ಎಲ್ಲಾ ಅವಶ್ಯಕತೆ ಇದೆ.ಆದರಲ್ಲಿ ನನಗೇನೂ ಇಪ್ಪೊಕ್ರೆಸಿ ಇಲ್ಲ. ನಾನು ವಿನಯದಿಂದ ಮತ್ತು ನೇರವಾಗಿ ಹೇಳುತ್ತಿದ್ದೇನೆ. ಪ್ರೈವೇಟ್ ಸೆಕ್ಟಾರ್ ಇನ್‌ವಾಲ್ ಮಾಡಿ, ಟೆಂಡರ್ ಕರೆಯಿರಿ. ನಾನು ಎಷ್ಟೋ ಫಾರಿನ್ ಕಂಟ್ರೀಸ್‌ಗೆ ಹೋಗಿ ನೋಡಿದ್ದೇನೆ. ಅವರು ಹೇಳುತ್ತಾರೆ, ನಾವು ಹಣ ಕೊಡುವುದಿಲ್ಲ ; You can allow them to collect money for 25 years and go.ಎಂದು.

ಯಾವುದೇ ಒಳ್ಳೆಯ ಕೆಲಸ ಮಾಡಬೇಕಾದರೆ ಹೆದರುವ ಪ್ರಶ್ನೆ ಇಲ್ಲ. ಈ ದೃಷ್ಟಿಯಿಂದ ಇವತ್ತು ಕೇಂದ್ರಸರ್ಕಾರದಿಂದ ಹಣ ಬಂದರೆ ಬಹಳ ಸಂತೋಷ. ಒಂದು ವೇಳೆ ಕೇಂದ್ರಸರ್ಕಾರದಿಂದ ಹಣ ಬರಲಿಲ್ಲವೆಂದು ಹೇಳಿದರೆ ಏನು ಮಾಡುತ್ತೀರಿ. ಅದಕ್ಕಾಗಿ ತಾವು ಇದನ್ನೂ ಗಮನದಲ್ಲಿಟ್ಟುಕೊಳ್ಳಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಉಪಾಧ್ಯಕ್ಷರು : ಮಾನ್ಯ ದೇಶಪಾಂಡೆಯವರೇ, ಈಗಾಗಲೇ 35 ನಿಮಿಷ ಆಗಿದೆ.

ಶ್ರೀ ಆರ್.ವಿ. ದೇಶಪಾಂಡೆ : ಇನ್ನು ಕಾವೇರಿ ವಾಟರ್ ಸಪ್ಲೈ. ಬೆಂಗಳೂರಿನಲ್ಲಿ ಕುಡಿಯುವ ನೀರಿನ ಅಭಾವ ಇದೆ. ನಾನು ನಿಮ್ಮ ಮೇಲೆ ಜವಾಬ್ದಾರಿ ಹಾಕುವುದಿಲ್ಲ. ಮಾನ್ಯ ಜಾರ್ಜ್‌ರವರು ಬಂದಿದ್ದಾರೆ, ಈ ರೀತಿಯಾಗಿದೆ ಎಂದು ನಾನು ಹೇಳುವುದಿಲ್ಲ. ಈ ಕುಡಿಯುವ ನೀರಿನ ಅಭಾವವನ್ನು ದೂರ ಮಾಡಬೇಕಾಗಿದೆ. ಕಾವೇರಿ ಮೂರನೇ ಹಂತದ ಯೋಜನೆಯನ್ನು ನಿಗದಿತ ಅವಧಿಯಲ್ಲಿ ಮುಗಿಸಬೇಕಾಗುತ್ತದೆ. ಮತ್ತು ಕಾವೇರಿ ನಾಲ್ಕನೇ ಹಂತದ ಯೋಜನೆ ಬಗ್ಗೆಯೂ ಕ್ರಮ ಪ್ರಾರಂಭ ಆಗಬೇಕು. ಕಾವೇರಿ ಮೂರನೆ ಹಂತದ ಯೋಜನೆ ಪೂರ್ಣವಾಗಿ ಮೂಗಿಯುವವರೆಗೂ ಕಾಯಬೇಡಿ. ನಾಲ್ಕನೆ ಹಂತದ ಯೋಜನೆ ಪ್ರಾರಂಭವಾಗಬೇಕು. ಈ ಕೆಲಸ ಆದರೆ, ನಾವು ಬೆಂಗಳೂರು ನಗರದ ಕುಡಿಯುವ ನೀರಿನ ಅಭಾವವನ್ನು ದೂರ ಮಾಡುವುದಕ್ಕೆ ಸಾಧ್ಯವಾಗಬಹುದು. ನೀವು ಬೋರ್‌ವೆಲ್ಸ್ ಎಷ್ಟು ಡ್ರಿಲ್ ಮಾಡುತ್ತೀರಿ; ಅಷ್ಟೇ ಪ್ರಮಾಣದಲ್ಲಿ ನೀರಿನ ಪ್ರಮಾಣ ಕಡಿಮೆಯಾಗುತ್ತಾ ಹೋಗುತ್ತದೆ. ಈ ಜ್ವಲಂತವಾದ ಸಮಸ್ಯೆಯನ್ನು ಬಗೆಹರಿಸಬೇಕಾದರೆ ಈ ಎರಡೂ ಯೋಜನೆಗಳನ್ನು ಪೂರ್ಣ ಮಾಡುವುದಕ್ಕೆ ಗಮನ ಕೊಡಬೇಕು. ಇವತ್ತು ಗೃಹನಿರ್ಮಾಣ ಸಹಕಾರ ಸಂಘಗಳಲ್ಲಿ ಸದಸ್ಯತ್ವದ ಸಮಸ್ಯೆ ಇದೆ. ಯಾವ ಬೋಗಸ್ ಸೊಸೈಟಿ ಇದ್ದವು, ಅವು ಹಾಗೆಯೇ ಇವೆ. ಸಾವಿರಾರು ಜನರು ಸೊಸೈಟಿಗಳಲ್ಲಿ ಸದಸ್ಯರಾಗಿದ್ದಾರೆ. ಅವರಲ್ಲಿ ಎಷ್ಟೋ ಜೀನಿಯನ್ ಜನರೂ ಸದಸ್ಯರಾಗಿದ್ದಾರೆ, ಅವರಿಗೆ ಸೈಟು ಕೊಡಬೇಕು. ಕಳೆದ ಎರಡು ವರ್ಷಗಳಲ್ಲಿ You have blocked those sites. ಹೆಚ್.ಯು.ಡಿ.ಸೆಕ್ರಟರಿಯಾಗಲೀ, ಡೆಪ್ಯೂಟಿ ಸೆಕ್ರಟರಿಯವರಾಗಲೀ ಈ ಬಗ್ಗೆ ತೀರ್ಮಾನ ಕೈಗೊಂಡಿಲ್ಲ. ಅರ್ಬನ್ ಸೀಲಿಂಗ್ ಮ್ಯಾಟರ್ಸ್ ಮತ್ತು ಸೊಸೈಟಿಗಳುಗೂ ಸಂಬಂಧ ಇಲ್ಲ. ನೀವು ಏನು ಮಡಿದಿರಿ, ನಿಮ್ಮ ಸರ್ಕಾರ ಬಂದನಂತರ ನಿಮ್ಮ ರಿಜಿಮ್‌ನಲ್ಲಿ ಕೊಟ್ಟಿದ್ದೀರಿ ಎಂದು ಹೇಳಬಹುದು. ಜಿನಿಯನ್ ಇದ್ದರೆ ಕೊಡಬೇಕಾಗುತ್ತದೆ, ಅರ್ಬನ್ ಸೀಲಿಂಗ್ ಕೊಡಲಿಲ್ಲವೆಂದರೆ, ಕಷ್ಟವಾಗುತ್ತದೆ. ನೀವು ಇವುಗಳ ಬಗ್ಗೆ ಕ್ರಮ ಕೈಗೊಳ್ಳಲು ಭಯ ಏಕೆ?

ಇವತ್ತು ಆ ಸೊಸೈಟಿಗಳಲ್ಲಿ ಯಾರು ತಪ್ಪಿತಸ್ಥರು ಇದ್ದಾರೆ ಅವರನ್ನು ಹ್ಯಾಂಗ್ ಮಾಡಿ. ಆದರೆ ಒಳ್ಳೆಯ ಸೊಸೈಟಿಗಳು ಇವೆ, ನಿಜವಾದ ಮೆಂಬರ್‌ಷಿಪ್ ಇದೆ, ಜಿನೈನ್ ಸೊಸೈಟಿಗಳು ಇವೆ, ಅವರಿಗೆ ಸಹಾಯ ಮಾಡಿ. ಅದರಲ್ಲಿರುವ ನಿಜವಾದ ಸದಸ್ಯರು ಹತ್ತು-ಇಪ್ಪತ್ತು ವರ್ಷಗಳಿಂದ ಗಳಿಸಿದ ಹಣವೆನ್ನೆಲ್ಲ ಅಲ್ಲಿ ಇನ್‌ವಾಲ್ವ್ ಮಾಡುತ್ತಾರೆ. ಎಲ್ಲರೂ ಕೆಟ್ಟವರೇ ಇರುತ್ತಾರೆಯೇ, ಎಲ್ಲರೂ ಬೋಗಸ್ ಮೆಂಬರ್‌ಶಿಪ್ ಮಾಡಿಕೊಂಡಿದ್ದಾರೆಯೇ ಎಂದರೆ ಇಲ್ಲ, ಜಿನೈನ್ ಮೆಂಬರ್ಸ್ ಸಹ ಇದ್ದಾರೆ. ಬೆಂಗಳೂರಿನಲ್ಲಿರತಕ್ಕ ರೆವಿನ್ಯೂ ಸೈಟ್ಸ್ ರೆಗ್ಯುಲರೈಸೇಷನ್ ಹಾಗೂ ಹೌಸಿಂಗ್ ಸೊಸೈಟಿಗಳು ಈ ಎರಡೂ ಜ್ವಲಂತ ಸಮಸ್ಯೆಗತಳಾಗಿವೆ. ಈ ಎಲಡರ ಬಗ್ಗೆ ಹೆಚ್ಚಿನ ಗಮನಹರಿಸಬೇಕು.

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) : ಮಾನ್ಯ ದೇಶಪಾಂಡೆಯವರು ಹೇಳಿದ ಸೊಸೈಟಿ ವಿಚಾರದಲ್ಲಿ ನಾವು ಕ್ಯಾಬಿನೆಟ್ ಸಬ್‌ಕಮಿಟಿ ಮಾಡಿದ್ದೇವೆ. ಆದಷ್ಟು ಬೇಗ ಇದರ ವಿಚಾರದಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೇವೆ. ರೆವಿನ್ಯೂ ಲ್ಯಾಂಡ್ ರೆಗ್ಯುಲರೈಸೇಷನ್ ಬಗ್ಗೆ ಸದನದಲ್ಲಿ ಬಿಲ್ ತರುವ ವ್ಯವಸ್ಥೆ ಮಾಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಈ ಗೃಹನಿರ್ಮಾಣ ಸಹಕಾರ ಸಂಘಗಳ ಬಗ್ಗೆ ಶ್ರೀ ಜಿ.ವಿ.ಕೆ. ರಾವ್ ಅವರ ಒಂದು ದೊಡ್ಡ ವರದಿ ಬಂದಿದೆ. ಆ ವರದಿ ಏನಾಗಿದೆ ? ಅದು ಮೂಲೆಗೆ ಹೋಗಿದೆಯೋ ಅಥವಾ ಉಪಸಮಿತಿ ಮುಂದೂ ಏನಾದರೂ ಬರುತ್ತದೆಯೋ? ಆ ವರದಿಯನ್ನು ಓದಿದ್ದೀರಾ? ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೀರಾ?

ಶ್ರೀ ಕೆ.ಜಿ. ಜಾರ್ಜ್ : ಆ ವರದಿ ಓದಿದ್ದೇನೆ. ಅದು ಸಬ್ ಕಮಿಟಿ ಮುಂದಿದೆ. ಆದಷ್ಟು ಬೇಗ ನಾವು ಒಂದು ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಆ ವರದಿಯನ್ನು ಕರಾರುವಾಕ್ಕಾಗಿ, ಅಕ್ಷರಶಃ ಒಪ್ಪುವುದಾದರೆ ನೂರಕ್ಕೆ ತೊಂಬತ್ತು ಭಾಗ ಗೃಹನಿರ್ಮಾಣ ಸಹಕಾರ ಸಂಘಗಳು ಖೋಟಾ ಜನ ಇದ್ದಾರಲ್ಲ ಅವರನ್ನು ಜೈಲಿಗೆ ಕಳುಹಿಸಬೇಕಾಗುತ್ತದೆ.

ಶ್ರೀ ಕೆ.ಜಿ. ಜಾರ್ಜ್ : ಮಾನ್ಯ ದೇಶಪಾಂಡೆಯವರು ಹೇಳಿದ್ದಕ್ಕೂ, ನೀವು ಹೇಳುತ್ತಿರುವುದಕ್ಕೂ ಬಹಳ ವ್ಯತ್ಯಾಸ ಇದೆ. ದೇಶಪಾಂಡೆಯವರು ಬಹಳಷ್ಟು ಜನ ಒಳ್ಳೆಯವರು ಇದ್ದಾರೆ ಎಂದು ಹೇಳುತ್ತಿದ್ದಾರೆ. ಆದರೆ ನೀವು ನೂರಕ್ಕೆ 90ರಷ್ಟು ಖೋಟಾ ಜನ ಇದ್ದಾರೆ, ಅವರನ್ನು ಜೈಲಿಗೆ ಕಳುಹಿಸಬೇಕು ಎಂದು ಹೇಳುತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ಜಿ.ವಿ.ಕೆ. ರಾವ್ ಅವರು ಒಳ್ಳೆಯ ವರದಿ ಕೊಟ್ಟಿದ್ದಾರೆ. ಅದರಲ್ಲಿ ಪ್ರತಿಯೊಬ್ಬರನ್ನೂ ಜರಡಿ ಹಿಡಿದು ನೋಡಿದ್ದಾರೆ. ಈ ಗೃಹನಿರ್ಮಾಣ ಸಹಕಾರ ಸಂಘಗಳು ಕತ್ತಾಳೆ ಬೆಳೆದಹಾಗೆ ಬೆಳೆಯುತ್ತಿವೆ. ಇಡೀ ಬೆಂಗಳೂರು ನಗರವನ್ನು ನಾಶ ಮಾಡುವುದರಲ್ಲಿ ಅವರು ಮೊದಲನೇ ಶತ್ರುಗಳು ಅದರಲ್ಲಿ ಅನುಮಾನವೇನೂ ಇಲ್ಲ, ಸರಕಾರವನ್ನು ಉರುಳಿಸತಕ್ಕಂಥ ಮಟ್ಟಕ್ಕೆ ಹೋರಟಿರತಕ್ಕಂಥ ಜನ ಅವರು.

ಶ್ರೀ ಕೆ.ಜಿ. ಜಾರ್ಜ್ : ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಒಂದು ವಿಷಯವನ್ನು ತಿಳಿದುಕೊಳ್ಳ ಬೇಕು. ಆ ವರದಿ ಏನಿದೆ ಅದು ಕ್ಯಾಬಿನೆಟ್ ಸಬ್‌ಕಮಿಟಿ ಮುಂದಿದೆ. ನಾವು ಸಂಪೂರ್ಣವಾಗಿ ಆ ವರದಿಯ ವಿಚಾರದಲ್ಲಿ ಚರ್ಚೆ ಮಾಡಿ ಒಂದು ತೀರ್ಮಾನ ತೆಗೆದುಕೊಳ್ಳುತ್ತೇವೆ. ಅದಕ್ಕಾಗಿಯೇ ನಾವು ಕ್ಯಾಬಿನೆಟ್ ಸಬ್‌ಕಮಿಟಿ ಮಾಡಿರುವುದು ಇಲ್ಲದಿದ್ದರೆ ನಾವು ಈಗ ಡಿಸಿಷನ್ ತೆಗೆದುಕೊಳ್ಳಬಹುದಾಗಿತು. ಕೂಲಂಕಷವಾಗಿ ಚರ್ಚೆ ಮಾಡಿದ ನಂತರ ತೀರ್ಮಾನ ಮಾಡುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ : ವಾಟಾಳ್‌ನಾಗರಾಜ್‌ರವರಿಗೂ, ನನಗೂ ಏನೂ ಭಿನ್ನಾಭಿಪ್ರಾಯ ಇಲ್ಲ, ಆ ವರದಿ ಪ್ರಕಾರ ಯಾರು ತಪ್ಪುಮಾಡಿದ್ದಾರೆ, ಅವರನ್ನು ಹ್ಯಾಂಗ್ ಮಾಡಿ. ಆದರೆ ಕೆಲವು ಒಳ್ಳೆಯ ಜನ ಇದ್ದಾರಲ್ಲ, ಅವರ ಬಗ್ಗೆ ವಿಚಾರ ಮಾಡಬೇಕಲ್ಲ, ಯಾರಿಗೋ ಸೈಟ್ ಬೇಕಾಗಿದೆ, 20 ವರ್ಷದಿಂದ ಹಣ ಕಟ್ಟಿದ್ದಾರೆ. ಇನ್ನೂ ಸೈಟ್ ಸಿಕ್ಕಿಲ್ಲ, ಅಂತಹ ಜನಗಳ ಬಗ್ಗೆ ವಿಚಾರ ಮಾಡಬೇಕಲ್ಲ, ಇನ್ನು ಚೇಂಜ್ ಆಫ್ ಲ್ಯಾಂಡ್. ಎರಡೂವರೆ ವರ್ಷದಿಂದ ಮಾಡಿಲ್ಲ, ನಾನೇ ಈ ಸದನದಲ್ಲಿ ಬಿಲ್ ಇಂಟ್ರಡ್ಯೂಸ್ ಮಾಡಿದ್ದೆ. ಆಗ ಮಾನ್ಯ ವೀರಪ್ಪಮೊಯಿಲಿಯವರು ಇದು ಸಾಧ್ಯವಿಲ್ಲ, ಇದರಲ್ಲಿ ಗೋಲ್‌ಮಾಲ್ ಇದೆ, ಮತ್ತೊಂದು ಮಾಡುತ್ತಾರೆ ಎಂದರು. ನಂತರ ನಮ್ಮ ಸರ್ಕಾರ ಹೋಯಿತು. ಈ ಬಿಲ್ ಆರ್ಡಿನೆನ್ಸ್ ಇಷ್ಯೂ ಮಾಡುವುದಕ್ಕೆ ದೆಲ್ಲಿಗೆ ಹೋಯಿತು. ಅಷ್ಟರಲ್ಲಿ ಅಸೆಂಬ್ಲಿ ಎಲೆಕ್ಷನ್ ಡಿಕ್ಲೇರ್ ಆಯಿತು, ಅದು ಬಂದಿಲ್ಲ, ಆಗ ನಿಮಗೆ ಭಯವಾಯಿತು ದೇಶಪಾಂಡೆಯವರು ಇಂಟ್ರಡ್ಯೂಸ್ ಮಾಡಿದಾಗ ನಾವು ವಿರೋಧ ಮಾಡಿದೆವು, ಈಗ ಹೇಗೆ ಮಾಡಬೇಕು ಎಂದು ನಿಮಗೆ ಹೆದರಿಕೆಯಾಯಿತು. ನೀವು ಹೆದರುವ ಕಾರಣ ಇಲ್ಲ, ಇವತ್ತು ಸಾವಿರಾರು ಪ್ರಕರಣಗಳು ಚೇಂಜ್ ಆಫ್ ಲ್ಯಾಂಡ್‌ಗೋಸ್ಕರ ನಿಂತಿವೆ. ಇದನ್ನು ನಾವು ಬಹಳ ಸಿಸ್ಟಮ್ಯಾಟಿಕ್ ಆಗಿ ಮಾಡಿದ್ದೇವೆ. ಮೊದಲು ಮಿನಿಸ್ಟರ್‌ಗೆ ಒಂದು ಫೈಲ್ ಬರುತ್ತಿತ್ತು ಅವರು ಬ್ಲೈಂಡ್ ಆಗಿ ಸೈನ್ ಮಾಡುತ್ತಿದ್ದರು, ಹಾಗಲ್ಲ ಮೊದಲು ಬಿ.ಡಿ.ಎ.ಗೆ ಅಪ್ಲಿಕೇಷನ್ ಫೈಲ್ ಮಾಡಬೇಕು, ಅದರ ಬಗ್ಗೆ ರೆಸಲ್ಯೂಷನ್ ಆಗಬೇಕು, ಆಮೇಲೆ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟವಾಗಬೇಕು, ಅಬ್ಜೆಕ್ಷನ್ಸ್ ಕಾಲ್‌ಫಾರ್ ಮಾಡಬೇಕು, ಹೀಗೆ ಸಿಸ್ಟಮ್ಯಾಟಿಕ್ ಆದ ಪ್ರೊಸೀಜರ್ ಮಾಡಿದ್ದೇವೆ. ಇದನ್ನು ಆದಷ್ಟು ಬೇಗ ನೀವು ಮಾಡಲಿಕ್ಕೆ ಪ್ರಯತ್ನ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ಈಗ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇಲ್ಲ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬದಲು ಗೃಹನಿರ್ಮಾಣ ಸಹಕಾರ ಸಂಘಗಳ ತಿಮಿಂಗಿಲಗಳು ಎಲ್ಲವನ್ನೂ ನುಂಗಿ ಬಿಟ್ಟಿವೆ. ಇವತ್ತು ಗ್ರೀನ್ ಬೆಲ್ಟ್, ಹಸಿರುವಲಯ ಎಂದು ಹೇಳತಕ್ಕಮ್ಮದ್ದು ಎಲ್ಲಿದೆ. ಎಲ್ಲವನ್ನೂ ನುಂಗಿ ನೀರು ಕುಡಿದು ಬಿಟ್ಟಿವೆ. ಈಗ ಇದು ಬೆಂಗಳೂರು ಬಿಟ್ಟು ಮೈಸೂರಿಗೂ ಹೋಗಿದೆ. ಎಸ್.ಆರ್.ಗೃಹನಿರ್ಮಾಣ ಸಹಕಾರ ಸಂಘ ಎಂಬುದು ಮೈಸೂರಿನಲ್ಲಿದೆ. ಇವರದ್ದೇನು ಲೂಟಿ ಲೂಟಿ. ಇವರು ಸುಮಾರು ಒಂದು ಸಾವಿರ ಎಕರೆ ಪ್ರದೇಶ ತೆಗೆದುಕೊಂಡಿದ್ದಾರೆ. ನೀವು ಇದನ್ನು ಸನಗ್ರವಾಗಿ ಚರ್ಚೆಗಾದರೂ ಇಡಿ. ಚರ್ಚೆಗೆ ತೆಗೆದುಕೊಂಡು ಬನ್ನಿ, ಇದರ ಒಳಗಡೆ ಇರತಕ್ಕಂಥ ಅನ್ಯಾಯಗಳು ಹೊರಗಡೆ ಬರುತ್ತವೆ. ಒಬ್ಬೊಬ್ಬರದೂ ಒಂದೊಂದು ಕಥೆ ಇದೆ.

ಉಪಾಧ್ಯಕ್ಷರು : ವಾಟಾಳ್ ನಾಗರಾಜ್‌ರವರೇ, ಅವರ ಟೈಮ್ ಮುಗಿಯಿತು. ಆಮೇಲೆ ನೀವು ಮಾತನಾಡುವುದಿಲ್ಲ ಎಂದರೆ ಮಾತನಾಡಿ ಬಿಡಿರಿ.

ಶ್ರೀ ಆರ್.ವಿ. ದೇಶಪಾಂಡೆ : ಬೆದಗಳೂರು ಅಭಿವೃದ್ಧಿ ಆಗಬೇಕೆಂದರೆ, ನೀವು ಬೆಂಗಳೂರಿನ ಸಮಸ್ಯೆಗಳ ಬಗ್ಗೆ ಗಮನಹರಿಸಬೇಕಾಗುತ್ತದೆ. ಇದಕ್ಕೆ ಸಫಿಷಿಯಂಟ್ ಟೈಂ ಕೊಡಬೇಕಾಗುತ್ತದೆ. ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಕೇಳುತ್ತೇನೆ. ಇನ್ನು ಪವರ್ ಜನರೇಷನ್. ಇದನ್ನು ಹೆಚ್ಚು ಮಾಡಿ. ಒಂದು ರಾಜ್ಯ ಪ್ರಾಸ್ಪರ್ ಆಗಬೇಕಾದರೆ ಪವರ್ ಬೇಕು. Power is very essential for the prosperity of the State. We require power for all purposes. ಹೆಚ್ಚು ಪವರ್ ಬೇಕು. ಅಗ್ರಿಕಲ್ಚರ್ ರಲಿ, ಇಂಡಸ್ಟ್ರಿ ಇರಲಿ, ಯಾವುದೇ ಒಂದು ಪ್ರಾಸ್ಪೆರಿಟಿ ಬರಬೇಕಾದರೆ ಪವರ್ ಬೇಕು. ಇವತ್ತು ನಿಮ್ಮ ಎಲ್ಲಾ ಕಾನ್‌ಸೆಂಟ್ರೇಷನ್ ಉತ್ತರ ಕನ್ನಡಜಿಲ್ಲೆಯಲ್ಲಿ ಆಗುತ್ತಿದೆ. ಬೇಡ್ತಿ ಅಫ್‌ನಾಶಿನಿ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಇದನ್ನು ಮಾಡುವಾಗ ಜಿಲ್ಲೆಯಲ್ಲಿ ಎಕಲಾಜಿಕಲ್ ಬ್ಯಾಲೆನ್ಸ್ ಏನು ಉಳಿಯಬೇಕು ಎನ್ನುವುದರ ಬಗ್ಗೆ ವಿಚಾರ ಮಾಡಿರಿ.

ಆ ದೃಷ್ಟಿಯಿಂದ ನಾನು ಬಹಳ ವಿನಯವಾಗಿ ಸರ್ಕಾರಕ್ಕೆ ಹೇಳುತ್ತಿದ್ದೇನೆ ದಯಮಾಡಿ ಬೇಡ್ತಿ ಯೋಜನೆಯನ್ನು ಕೈ ಬಿಡಿ. ಅದರಿಂದ ಏನೂ ಉಪಯೋಗವಾಗುವುದಿಲ್ಲ. ಎಂಟೈರ್ ಇಕಾಲಜಿ ಬ್ಯಾಲೆನ್ಸ್ ಇಟ್ಟುಕೊಳ್ಳಿ. ಇವತ್ತು ಏನಾಗಿದೆಯೆಂದರೆ, ರೀ ಹ್ಯಾಬಿಲಿಟೇಷನ್ ಸೀ ಬರ್ಡ್ ಪ್ರಾಜೆಕ್ಟ್ ಎಂಬ ಬಹಳ ದೊಡ್ಡ ನೌಕಾನಲೆ ಪ್ರಾಜೆಕ್ಟ್ ಕೊಟ್ಟಿದ್ದೇವೆಂದು ಹೇಳಿದರು ಕಾಳಿ ಪ್ರಾಜೆಕ್ಟ್ ಸೆಕೆಂಡ್ ಸ್ಟೇಜ್ ಕೆಲಸ ನಡೆಯುತ್ತಿದೆ. ಕೈಗಾ ಪ್ರಾಜೆಕ್ಟ್ ಕೆಲಸ ನಡೆಯುತ್ತಿದೆ. ಆಗ ನಮ್ಮ ಜನರೆಲ್ಲರೂ ಸ್ವಾಗತ ಮಾಡಿದರು. ಅದು ನಮ್ಮೆಲ್ಲರ ಸಹಕಾರ ಕಾರ್ಯಗತ ಆಗುತ್ತಿದೆ. ಆದರೆ ರಿ ಹ್ಯಾಬಿಲಿಟೇಷನ್ ಏನು ಆಗಿದೆ ? ಯಾವ ಜನರು ಈ ದೇಶದ ಸಲುವಾಗಿ ಸ್ವಾತಂತ್ರ ಹೋರಾಟದಲ್ಲಿ ಭಾಗಿಗಳಾಗಿ ತ್ಯಾಗ ಮಾಡಿದರೋ ಅಷ್ಟೇ ತ್ಯಾಗವನ್ನು ಈ ಜನ ಇದರಲ್ಲಿ ಮಾಡಿದ್ದಾರೆ. ಆದರೆ ಇವತ್ತು ಆ ಜನರನ್ನು ಯಾರೂ ನೋಡಿತ್ತಿಲ್ಲ. ದುರ್ದೈವ, ನಮ್ಮ ಜಿಲ್ಲೆಗೆ ಮಂತ್ರಿಗಳು ಇಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ಜಿಜನ ಎಂ.ಎಲ್.ಎಗಳು ಇದ್ದಾರೆ ನಮ್ಮ ಜಿಲ್ಲೆಗೆ ಒಬ್ಬರನ್ನಾದಲೂ ಮಂತ್ರಿ ಮಾಡಿ ಎಂದು ಹೇಳಿದೆವು ಆದರೆ ನಜೀರ್ ಅಹ್ಮದ್ ಅವರನ್ನು ಮಂತ್ರಿ ಮಾಡಿದ್ದಾರೆ. ಅವರು ಬರುವುದನ್ನು ನಾವು ವಿರೋಧ ಮಾಡುತ್ತಿಲ್ಲ. ಆದರೆ ನಾವು ಹೇಳುವುದೇನೆಂದರೆ, ನಮ್ಮ ಜಿಲ್ಲೆಯವರನ್ನೇ ಮಂತ್ರಿ ಮಾಡಿದರೆ ಅವರಿಗೆ ಒಂದು ಅಭಿರುಚಿ ಇರುತ್ತದೆ, ಇಂಟ್ರೆಸ್ಟ್ ಇರುತ್ತದೆ. ಕಳೆದ ಎರಡೂವರೆ ವರ್ಷಗಳಿಂದಲೂ ಒಂದೂ ರಿ ಹ್ಯಾಬಿಲಿಟೇಷನ್ ಕಮಿಟಿ ಮೀಟಿಂಗ್ ಮಾಡಿಲ್ಲ. Please see the records. Only one Rehabilitation Committee Meeting has taken place during the last $2\frac{1}{2}$

Years. ಮೊನ್ನೆ ಮಾನ್ಯ ನಜೀರ್ ಅಹಮ್ಮದ್ ಬಂದು ಮೀಟಿಂಗ್ ಮಾಡಿ ಹೋದರು. ಹಿಂದೆ ಎರಡು ತಿಂಗಳಿಗೊಮ್ಮೆ ಭೇಟಿ ಮಾಡತ್ತಿದ್ದವು. ಸಮಸ್ಯೆಗಳನ್ನು ಚರ್ಚೆಮಾಡುತ್ತಿದ್ದೆವು. ಕಳೆದ ಎರಡೂವರೆ ವರ್ಷದಲ್ಲಿ ಯಾವ ಪ್ರಯತ್ನ ಕೂಡ ಈ ಬಗ್ಗೆ ಮಾಡಲಿಲ್ಲ. ಇದಕ್ಕೆ ಎಷ್ಟು ಇಂಪಾರ್ಟೆನ್ಸ್ ಕೊಟ್ಟಿದ್ದಾರೆಂದು ತಾವೇ ವಿಚಾರ ಮಾಡಿ. ಒಂದು ತಿಂಗಳಿಗೆ, ಎರಡು ತಿಂಗಳಿಗೆ ಮೀಟಿಂಗ್ ಮಾಡಬೇಕಾಗಿತ್ತು. ಸಮಸ್ಯೆಯನ್ನು ಚರ್ಚೆ ಮಾಡಬೇಕಾಗಿತ್ತು. Land released but Forest Dept. did not release.

ಅಂಕೋಲದಲ್ಲಿ ರಿಹ್ಯಾಬಿಲಿಟೇಷನ್‌ಗೆ ಲ್ಯಾಂಡ್ ರಿಲೀಜ್ ಆಯಿತು. ಆದರೆ ಇವತ್ತು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಅಬ್ಜೆಕ್ಟ್ ಮಾಡುತ್ತಿದ್ದಾರೆ. ಇದನ್ನು ನೋಡಲಿಕ್ಕೆ ಯಾರೂ ತಯಾರು ಇಲ್ಲ. ಮಾನ್ಯ ವೀರೇಂದ್ರಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ನಾವು ಅವರಿಗೂ ಹೇಳಿದೆವು, ಅವರು ಮೀಟಿಂಗ್ ಮಾಡುತ್ತೇನೆ ಎಂದು ಹೇಳಿ ಹೇಳಿ, ಅವರು ಮೀಡಿಂಗ್ ಮಾಡಲಿಲ್ಲ, ಅವರೇ ಹೋದರು. ನಾನು ಹೇಳುತ್ತೇನೆ. ಇಂತಹ ಪ್ರಾಜೆಕ್ಟ್‌ಗಳನ್ನು ತಯಾರು ಮಾಡುವಾಗ ಜನರ ಬಗ್ಗೆ ಕೂಡ ನಾವು ವಿಚಾರ ಮಾಡಬೇಕಾಗುತ್ತದೆ. ಜನರ ದೃಷ್ಟಿಯಿಂದ ಹೆಚ್ಚಿನ ಗಮನ ಕೊಟ್ಟು, ಅವರನ್ನು ರಿಹ್ಯಾಬಿಲಿಟೇಷಮ್ ಮಾಡಲು ಸರ್ಕಾರ ಹೆಚ್ಚು ಗಮನಕೊಡಬೇಕಾಗಿದೆ. ಆಮೇಲೆ ನಾನು ಈ ಸಂದರ್ಭದಲ್ಲಿ ಇನ್ನೊಂದು ಮಾತು ಹೇಳುವುದೇನೆಂದರೆ Non-conventional energy sources. ಹೆಚ್ಚು ಮಾಡುವುದಕ್ಕೆ ಪ್ರಯತ್ನಮಾಡಬೇಕು, ಇದನ್ನು ನಾವು ಮಾಡಿಲ್ಲ. ಈ ದೃಷ್ಟಿಯಿಂದ ಸರ್ಕಾರ ಇವತ್ತು ಪ್ರಯತ್ನ ಮಾಡಬೇಕು. ಮತ್ತೊಂದು ಹೊಸ ಸ್ಕೀಮ್‌ನ್ನು ಇವರು ತಂದಿದ್ದಾರೆ. ಅದೇನೆಂದರೆ, ಹೆಲ್ತ್ ಚೆಕ್ ಆಫ್ ಪ್ರತಿ 6 ತಿಂಗಳಿಗೊಮ್ಮೆ ಹೆಲ್ತ್ ಚೆಕ್ ಅಪ್ ಮಾಡಿಸುತ್ತಾರೆ. ಅದನ್ನು ನಾನು ಒಪ್ಪುತ್ತೇನೆ. ಹೆಲ್ತ್ ಈಸ್ ವೆಲ್ತ್ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ ಆದರೆ ಯಾರು ಹೆಲ್ತ್ ಚೆಕ್ ಮಾಡುತ್ತಾರೆ, ಹೇಗೆ ಮಾಡುತ್ತಾರೆ? ಈ ಒಂದು ಸ್ಕೀಮ್ ಇದೆ ಎಂದು ಯಾರಿಗೆ ಗೊತ್ತಾಗಬೇಕು? ಯಾರೋ ವಾಲೆಂಟರ್ಸ್ ಬರಬಹುದು. ಆದರೆ ನಾನು ಸರ್ಕಾರಕ್ಕೆ ಒಂದು ಕಾಶನ್ ಕೊಡುತ್ತಿದ್ದೇನೆ. ಇದರಲ್ಲಿ ಹಣ ಮಿಸ್‌ಯೂಸ್ ಆಗುತ್ತದೆ. ಈ ವರ್ಷ ತಾವು ಇದಕ್ಕೆ ಒಂದು ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ಮುಂದಿನ ವರ್ಷ ನಾವು ಇಷ್ಟು ಜನಗಳಿಗೆ ಹೆಲ್ತ್ ಚೆಕ್ ಅಪ್ ಮಾಡಿದ್ದೇವೆಂದು 2 ಕೋಟಿ ರೂಪಾಯಿಗಳ ಬೋಗಸ್ ಬಿಲ್‌ಗಳು ಬರುತ್ತವೆ. This is not a practical scheme. There will be misuse under this scheme. ನಾನು ಮೊದಲೇ ಹೇಳಿದ ಹಾಗೆ, ಹೆಲ್ತ್ ಈಜ್ ವೆಲ್ತ್. ಹೆಲ್ತ್ ಚೆಕ್ ಅಪ್ ಮಾಡಿಸಿರಿ. ಸಾಮಾನ್ಯವಾಗಿ ಆರೋಗ್ಯವಾಗಿದ್ದವರನ್ನು ಡಾಕ್ಟರ್ ಹತ್ತಿರ ಕರೆದುಕೊಂಡು ಹೋಗಿ ತೋರಿಸಿ ಅವರಿಗೇಕೆ ಒಂದು ಸಮಸ್ಯೆಯನ್ನುಂಟು ಮಾಡುತ್ತಿದ್ದೀರಿ ತಾವು ವರ್ಷದಲ್ಲಿ ಎರಡು ಸಾರಿ ಅವರನ್ನು ಡಾಕ್ಟರ್ ಹತ್ತಿರ ತೆಗೆದುಕೊಂಡು ಹೋಗುತ್ತೀರಿ. ಪ್ರತಿ 6 ತಿಂಗಳಿಗೊಮ್ಮೆ ಜನರನ್ನು ಡಾಕ್ಟರ್ ಬಳಿ ಕರೆದುಕೊಂಡು ಹೋಗಿ ಅವರ ಹೆಲ್ತ್ ಚೆಕ್ ಅಪ್ ಮಾಡಿಸುವುದರಿಂದ ಅವರು ನಾವು ಅನಾರೋಗ್ಯವಾಗಿದ್ದೇವೆಂದು ತಿಳಿದುಕೊಳ್ಳಬಹುದು. ಆದ್ದರಿಂದ ಈ ಸ್ಕೀಮ್ ಪ್ರಕ್ಟಿಕಲ್ ಅಲ್ಲ. ಈ ಸ್ಕೀಮ್‌ನಿಂದ ಏನೂ ಬೆನಿಫಿಟ್ ಇಲ್ಲ. ಇದರಿಂದ ಹಣ ಮಿಸ್ ಯೂಸ್ ಆಗಪಹುದು. ನಾವು ಇಷ್ಟು ಜನಗಳಿಗೆ ಹೆಲ್ತ್ ಚೆಕ್ ಅಪ್ ಮಾಡಿದ್ದೇವೆಂದು ಬೋಗಸ್ ಬಿಲ್ಸ್ ರೆಡಿ ಆಗಬಹುದು. ಅಷ್ಟು ಹಣ ರಿಲೀಜ್ ಆಗಬಹುದು, ಅಷ್ಟೇ ವಿನಹಃ ಬೇರೆ ಏನೂ ಪ್ರಯೋಜನವಿಲ್ಲ. ಆದ್ದರಿಂದ ತಾವು ಈ ಸ್ಕೀಮ್ ಬಗ್ಗೆ ಪುನರ್‌ಪರಿಶೀಲನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮತ್ತೊಂದು ವಿಚಾರ ಏನೆಂದರೆ ಪಂಚ ಸೂತ್ರ ಎಂಬ ಕಾರ್ಯಕ್ರಮವನ್ನು ಹೊಸದಾಗಿ

ತಂದಿದ್ದಾರೆ. ಹಿಂದೆ ಪಂಚಶೀಲ ಎಂದು ಜವಹರಲಾಲ್ ನೆಹರು ಕಾಲದಲ್ಲಿ ಕೇಳಿದ್ದೆವು. ಈಗ ಪಂಚ ಸೂತ್ರ ಎಂಬ ಕಾರ್ಯಕ್ರಮವನ್ನು ತಂದಿದ್ದಾರೆ. ಇದು ಪಂಚಸೂತ್ರ ಎಂದು ನನಗನ್ನಿಸುತ್ತದೆ, ಪಂಚ ಸೂತ್ರ ಅಲ್ಲದೆ ಮತ್ತೇನೂ ಅಲ್ಲ, ಇದಕ್ಕೆ ಅಕೌಂಟಬಿಲಿಟಿ ಇಲ್ಲ, ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಯಾರನ್ನು ಬಿಡಬೇಕು ಎಂದು ಏನೂ ಇಲ್ಲಯ ಬರೀ ಪಂಚ ಸೂತ್ರ ಪುಸ್ತಕದಲ್ಲಿಯೇ ಉಳಿಯುತ್ತದೆ. ನಿಮಗೆ ಅಡ್ಜಿನಿಸ್ಟ್ರೇಷನ್ ವಿಲ್ ಬೇಕು. ಆಡಳಿತವನ್ನು ನಿಮ್ಮ ಹಿಡಿತದಲ್ಲಿಟ್ಟುಕೊಳ್ಳಲು ನೀವು ಪ್ರಯತ್ನಮಾಡಿಲ್ಲ, ಅದಕ್ಕೆ ಅವಕಾಶ ಇದೆ. ದಯಮಾಡಿ ನೀವೆಲ್ಲ ಸಹಕಾರ ಕೊಡಿ. ಹಿಂದುಳಿದವರು ಮುಖ್ಯಮಂತ್ರಿಗಳಾಗಿದ್ದಾರೆ. ಅವರು ೨ವರ್ಷ ಇರಲಿ. ನೀವೆಲ್ಲ ಸಹಕರಿಸಬೇಕು. ತಾವು ಈ ಪರಿಸ್ಥಿತಿಯಲ್ಲಿ ಸ್ವಲ್ಪ ಕಾಶಿಯಸ್ ಆಗಿ ಹೋಗಬೇಕಾಗುತ್ತದೆ. ಮತ್ತು ಆಡಳಿತದಲ್ಲಿ ಸಾಕಷ್ಟು ಬಿಕ್ಕಟ್ಟು ಬರಬೇಕಾಗುತ್ತದೆ.

ಮತ್ತೊಂದು ನನಗೆ ಬಹಳ ಆಶ್ಚರ್ಯವಾಗುತ್ತದೆ. ಏನೆಂದರೆ ಹೆಗಡೆಯವರ ಹೆಸರನ್ನು ಎತ್ತದಿದ್ದರೆ ಬಹುಶಃ ಇವರಿಗೆ ನಿದ್ದೆಯೇ ಹತ್ತುವುದಿಲ್ಲ, ರಾಜ್ಯಪಾಲರ ಭಾಷಣದ ಇದರಲ್ಲಿ ಲಾಸ್ಟ್ ಪ್ಯಾರಾದಲ್ಲಿ ಅದನ್ನೇ ಹೇಳಿದ್ದಾರೆ."The Report of Justice Kuldip Singh Commission and Justice Dayal Commission are under serious consideration of my Government."

I think without referring to Mr. Hegdae, this Government cannot function.

ಹೆಗಡೆಯವರು ಅಂದರೆ ನಿಮಗೆ ಸಿಂಹ ಸ್ವಪ್ನವೇ? ನಿಮಗೆ ಏನು ಭಯ? ನನ್ನ ಮಿತ್ರರಾದ ಏಕಾಂತಯ್ಯನವರು ನಿನ್ನೆ ಹೇಳಿದ ಹಾಗೆ ಬಹಳಷ್ಟು ರಿಪೋರ್ಟ್‌ಗಳು ಇವೆ. ಅವುಗಳನ್ನು ಪರಿಶೀಲನೆ ಮಾಡಿ ಆದರೆ ಒಂದು ಮಾತು. I am happy to congratulate the Chief Minister.

ಮೊನ್ನೆ ಒಂದು ಪ್ರಶ್ನೆಗೆ ಉತ್ತರ ಕೊಡುವಾಗ The Report is being referred to the law Department because it has to stand the legal scrutiny ಎಂದು ಹೇಳಿದ್ದಾರೆ. ಅಟ್ ಲೀಸ್ಟ್ ಮುಖ್ಯ ಮಂತ್ರಿಗಳಿಗೆ ಗೊತ್ತಾಗಿದೆ. ಮನಸ್ಸಿಗೆ ಬಂದ ಹಾಗೆ ಮಾಡುವುದಕ್ಕಾಗುವುದಿಲ್ಲ, ಸ್ಕ್ರೂಟಿನಿಗೆ ಕಳುಹಿಸಬೇಕೆಂದು ಗೊತ್ತಾಗಿದೆ. ಸ್ಕ್ರೂಟಿನಿಗೆ ಕಳುಹಿಸಬೇಕೆಂದರೆ, I am sure you are all convinced that there is nothing ಅಲ್ಲಿ ಏನೇನೂ ಇಲ್ಲವೆಂದು ಅರ್ಥ. ನೀವು ದಯಾಳ್ ಕಮಿಷನ್ ಮಾಡಿದಿರಿ. ಇವರು ಯಾವ ದಯಾಳ್? ನಮ್ಮ ಸರ್ಕಾರ ಇದ್ದಾಗ ಬಾಂಬೆಯಲ್ಲಿ ಚಂದೂರ್ಕರ್ ಅಂತಲೋ ಯಾರೋ ಪ್ರೆಸಿಡೆಂಟ್ ರೂಲ್ ಬಂದಾಗ ಏಕೆ ಚೇಂಜ್ ಮಾಡಿದಿರಿ. ಏನು ಅವಶ್ಯಕತೆ ಇತ್ತು? ಏನೂ ಅವಶ್ಯಕತೆ ಇದ್ದಿಲ್ಲ, ಯಾರೋ ಒಬ್ಬರದು ಅಪಾಯಿಂಟ್ ಆಯಿತು. because you wanted as ಮಾನ್ಯ ಉಪಾಧ್ಯಕ್ಷರ ಅಪ್ಪಣೆ ಮೇರೆಗೆ ಈ ಪದವನ್ನು ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾವೆಲ್ಲ Whoever has done it. May be, it may be referred to him. ಯಾರೋ ಒಬ್ಬರು ಜಡ್ಜನ್ನು ನೇಮಕ ಮಾಡಿದ್ದಾರೆ. ಆ ಜಡ್ಜ್ ಕಮಿಷನ್ ಆಫ್ ಎನ್‌ಕ್ವೈರಿ ಆಕ್ಟ್ ಪ್ರಕಾರ ರಿಪೋರ್ಟ್ ಕೊಟ್ಟಿದ್ದಾರೆ. ಅವವ ವರದಿಯ ಬಗ್ಗೆ ಬೇಕಾದರೆ ವಿಚಾರ ಮಾಡಿ. ಆದರೆ ಆ ವ್ಯಕ್ತಿಯ ಬಗ್ಗೆ ಚರ್ಚೆ ಮಾಡತಕ್ಕಂಥಾದ್ದು ಇಲ್ಲಿ ಸಲ್ಲತಕ್ಕದ್ದಲ್ಲ, ಏಕೆಂದರೆ ನಮ್ಮ ರೂಲ್ಸ್ ಪ್ರಕಾರ that has to be expunged

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮೊಯಿಲಿಯವರು ಹೇಳುತ್ತಿರುವುದು ಈ ಸದನಕ್ಕೆ ಸಂಬಂಧಿಸಿರಬಹುದು. ಪಾರ್ಲಿಮೆಂಟ್‌ನಲ್ಲಿ ರಾಮಸ್ವಾಮಿಯಂಥ ಬಗ್ಗೆ ಕೊಟ್ಟ ದೂರನ್ನು

ಸ್ಪೀಕರ್‌ರವರೇ ಅಡ್ಮಿಟ್ ಮಾಡಿದ್ದಾರೆ. ಇನ್ನು ಈ ದಯಾಳ್. ಕುಲದೀಪ್ ಇವರೆಲ್ಲಾ ಯಾರು?

ಶ್ರೀ ಎಂ. ವೀರಪ್ಪ ಮೊಯಿಲಿ : ರಾಮಸ್ವಾಮಿ ಬಗ್ಗೆ ಪಾರ್ಲಿಮೆಂಟ್ ಸದಸ್ಯರು ನೋಟೀಸ್ ಕೊಟ್ಟಿದ್ದು ಇಂಪೀಚ್‌ಮೆಂಟ್‌ಗೆ.

ಶ್ರೀ ಆರ್.ವಿ. ದೇಶಪಾಂಡೆ : ಇವತ್ತು ಏನಾಗಿದೆ? ಇವರ ಇಂಟಿಗ್ರೆಟಿ ಬಗ್ಗೆ, ಈ ಜಸ್ಟೀಸ್ ದಯಾಳ್ ಕಮಿಷನ್ ಬಗ್ಗೆ ಈಗ ಮಾತನಾಡುವುದಿಲ್ಲ. ಸಮಯ ಬಂದಾಗ ಹೇಳುತ್ತೇನೆ. ಜಸ್ಟೀಸ್ ದಯಾಳ್ ಕಮಿಷನ್ ರಚನೆಯಾದ ನಂತರ ಇವರ ಸೆಕ್ರೆಟರಿ ಎಸ್.ಆರ್. ವೆಂಕಟೇಶ್ ರಿಸೈನ್ ಮಾಡಿದರು. ಇವರು ರಿಪೋರ್ಟ್ ಕೊಡುವುದಕ್ಕಿಂತ ಮುಂಚೆ ಕಾಟ ತಡೆಯಲಾರದೆ ಅವರು ರಿಸೈನ್ ಮಾಡಿದರು. ಇವರು ಏಕೆ ರಿಸೈಸ್ ಮಾಡಿದರು. ನಾನು ಇದರ ಬಗ್ಗೆ ಒಂದು ಪ್ರಶ್ನೆ ಹಾಕಿದ್ದೆ ಅದಕ್ಕೆ ಇನ್ನೂ ಉತ್ತರ ಬಂದಿಲ್ಲ. ಈ ಕಮಿಷನ್‌ಗಾಗಿ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ? ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಇವರ ಟಿ.ಎ, ಡಿ.ಎ, ಎಷ್ಟು? ಇದರ ಬಗ್ಗೆ ಕಳೆದ ಅಧಿವೇಶನದಲ್ಲಿ ಪ್ರಶ್ನೆ ಹಾಕಿದರೆ ಇನ್ನೂ ಉತ್ತರ ಕೊಟ್ಟಿಲ್ಲ. ಆ ಕಮಿಷನ್ ಏನು ಹೇಳುತ್ತದೆ ಅಂದರೆ;

"He did not take any action on written complaint of Sri C.P. Bharathan. When he was going to set up a Commission of Enquiry, there was no need of giving a Press statement in defence to the extent that it was a smear compaign launched by the Opposition against him and his family and that they thought that if a falsehood was uttered, many a time, it would acquire the ring of truth. This way, he was certainly guilty of overdoing for defending his son and nephew and that was unbecoming of a Chief Minister in a democratic set up"

This is the only adverse remark against Mr. Hegde. I think, Mr. Moily would agree with me that for the first time in the history of the world, a Chief Miniser appointed a Commission of Enquiry in respect of his own son. Is ther any parallel example? This Commission goes to the extent of giving 8 (b) Notice where Commission feels guilty. The Opposition was attacking him and so to defend himself, he said, 'I am honest'. Suppose I attack Mr. Moily will you not say, 'I am honest'. When the former Prime Minister was attacked in Bofors Deal, did he not say, Myself nor my family members are involved in it. Did he not say? Do you mean to say it influenced Mr. Shankarnand's Report? Therefore, with all due respect to such Commission, I submit that the Government has to think as to what extent it should go and to what extent it should believe. Unfortunately, I do not want to blame that Chief Minister.

ಚೀಫ್ ಮಿನಿಸ್ಟರ್ ಅವರು ಪ್ರೆಸ್ ಕಾನ್‌ಫೆರೆನ್ಸ್‌ನಲ್ಲಿ ಏನು ಹೇಳಿದರು ಅಂದರೆ, "The Commission found that Ramakrishna Hegde is instrumental in getting deleted the name of his som Sri Bharat Hegde in the charge filed by the police." ಹೀಗೆ ಮಾನ್ಯ ಮುಖ್ಯ ಮಂತ್ರಿಗಳು ಕ್ಯಾಬಿನೆಟ್ ಮೀಟಿಂಗ್ ಆದ ನಂತರ ಬ್ರೀಫಿಂಗ್‌ನಲ್ಲಿ ಹೇಳಿದರು. ಆದರೆ ನಮ್ಮ ಮಾನ್ಯ ಪಾರ್ಲಿಮೆಂಟರಿ ಅಫೇರ್ಸ ಮಿನಿಸ್ಟರ್

ಅವರು ರಿಪೋರ್ಟ್ ತರಿಸಬೇಕು. Nowhere such adverse finding is there against Mr. Hedge in the Report. No doubt Justice Dayal discussed the issue but he came to the conslusion , 'No' Hegde is instrumental ಎಂದು ಹೇಳಲಿಲ್ಲ. ಆದರೆ ಚೀಫ್ ಮಿನಿಸ್ಟರ್ ಬ್ರೀಫಿಂಗ್‌ನಲ್ಲಿ "Hedge is instrumental" ಎಂದು ಹೇಳಿದರು. The officer might have misguided him. The officers might have also wrongly briefed him. Mr. Hedge has written him a letter. ಮಾನ್ಯ ಹೆಗಡೆ ಅವರು ಲೆಟರ್ ಬರೆದಿದ್ದಾರೆ, ಮಾನ್ಯ ಮುಖ್ಯ ಮಂತ್ರಿಗಳೇ, ದಯಾಳ್ ಕಮಿಷನ್‌ನಲ್ಲಿ ಇಂತಹ ಒಂದು ಆಪಾದನೆ ನನ್ನ ಮೇಲೆ ಇಲ್ಲ. ತಾವು ಈ ಆಪಾದನೆಯನ್ನು ಪ್ರತಿಕೆ ಮುಖಾಂತರ ನನ್ನ ಮೇಲೆ ಮಾಡಿದ್ದೀರಿ. ಇದರ ಬಗ್ಗೆ ಸ್ಪಷ್ಟೀಕರಣ ಕೊಡಿ ಎಂದು ಪತ್ರ ಬರೆದಿದ್ದಾರೆ. ಆದರೆ ಇನ್ನೂವರೆಗೆ ಮುಖ್ಯ ಮಂತ್ರಿಗಳು ಪತ್ರ ಬರೆದಿಲ್ಲ. ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕಾಗುತ್ತದೆ. ನಾನು ಮುಖ್ಯ ಮಂತ್ರಿಗಳನ್ನು ಬ್ಲೇಮ್ ಮಾಡುತ್ತಿಲ್ಲ. ರಾಂಗ್ ಪ್ರಿಸ್ಯೂಮ್ ಆಗಿರಬಹುದು. ಆದರೆ ಸ್ಟೇಟ್ ಫ್ಯಾಕಟ್ಸ್ ಇರುವುದಕ್ಕೆ, ಕನ್ನಡ ನಾಡಿನ ಜನತೆಗೆ ಸತ್ಯ ಪರಿಸ್ಥಿತಿ ತಿಳಿಸುವುದಕ್ಕೆ ಸತ್ಯ ಹೊರ ಬರುವುದಕ್ಕೆ ತಾವು ಹೇಳಬೇಕಾಗುತ್ತದೆ. ಇವತ್ತು ಹೆಗಡೆ ಅವರಾಗಲೀ ಅಥವಾ ದೇಶಪಾಂಡೆಯವರಾಗಲೀ ಗಿಲ್ಟಿ ಇದ್ದರೆ ಆಕ್ಷನ್ ತೆಗೆದುಕೊಳ್ಳಿ. ಅದರ ಬಗ್ಗೆ ಪ್ರಶ್ನೆ ಇಲ್ಲ. ಆಕ್ಷನ್ ತೆಗೆದುಕೊಳ್ಳಬೇಡಿ ಎಂದು ಹೇಳುತ್ತಿಲ್ಲ. ಒಂದು ಏನು ಆಯಿತು ಅಂದರೆ, ಅದೇ ಮ್ಯಾಟರ್‌ನಲ್ಲಿ ಭರತ್ ಹೆಗಡೆ ಮೇಲೆ ಅಪ್ಲಿಕೇಶನ್ ಕೊಟ್ಟರು. after the Dayal Commission Report. The Chief Judicial Magistrate Slapped the Commission. He said, there is no evidence. He has no evidence to frame a charge against this fellow. It is a fact. He said, I cannot frame a charge against Mr. Bharat Hegde. There is no evidence. " It is a fact.

ಶ್ರೀ ಎಂ. ವೀರಪ್ಪ ಮೊಯಿಲಿ : ಸ್ವಲ್ಪ ತಾವು ಯೀಲ್ಡ್ ಆಗುವುದಾದರೆ ಹೇಳುತ್ತೇನೆ. ತಾವು ಸಹ ವಕೀಲರು ಇದ್ದೀರಿ. ತಾವು ಮಂತ್ರಿಗಾಗಿದ್ದವರು, ಕಮೀಷನ್ ಆಫ್ ಎನ್‌ಕ್ವೈರಿಗೂ ಒಂದು ಕ್ರಿಮಿನಲ್ ಚಾರ್ಜ್‌ಗೂ ಎಷ್ಟು ಅಜಗಜಾಂತರ ವ್ಯತ್ಯಾಸ ಇದೆಯೆಂಬುದನ್ನು ತಾವು ವಿಚಾರ ಮಾಡಬೇಕು. ಅದಕ್ಕೂ ಇದಕ್ಕೂ ಹೋಲಿಕೆಯೇ? ಅಲ್ಲಿ ಛಾರ್ಜ್ ಮಾಡಬೇಕಾದ್ದು ಕ್ರಿಮಿನಲ್ ಆ ಕ್ರೈಟೀರಿಯಾ ಇಟ್‌ಸೆಲ್ಫ್ ಈಸ್ ಡಿಪರೆಂಟ್. ಇದರಲ್ಲಿ ಲಯಬಿಲಿಟಿ ಫಿಕ್ಸ್ ಮಾಡುವುದರಲ್ಲಿ ವ್ಯತ್ಯಾಸ ಇದೆ. ಇದಕ್ಕೂ ಅದಕ್ಕೂ ತಾಳೆ ಮಾಡುವುದಕ್ಕಾಗುತ್ತದೆಯೇ? You must have been excluded by the Commission. It may be rightly or so. ಆದರೆ ತಾವು ಕಮೀಷನ್‌ಗೂ ಮ್ಯಾಜಿಸ್ಟ್ರೇಟ್‌ಗೂ ಹೋಲಿಕೆ ಮಾಡಿ ಇಂತಹ ಒಂದು ಉನ್ನತ ವೇದಿಕೆಯ ಮೇಲೆ ವಾದ ಮಾಡುತ್ತಿದ್ದೀರಲ್ಲ.

(ಗೊಂದಲ)

SRI R.V. DESHPANDE : I am at liberty to say. I am telling the facts.

ಶ್ರೀ ಎಂ. ವೀರಪ್ಪ ಮೊಯಿಲಿ : ಸ್ವಲ್ಪ ತಾವು ಯೀಲ್ಡ್ ಆಗುವುದಾದರೆ ಹೇಳುತ್ತೇನೆ. ಒಂದು ಕ್ರಿಮಿನಲ್ ದಾವೆ ಮಾಡುವಂತಹ ಮ್ಯಾಜಿಸ್ಟ್ರೇಟ್ ಮತ್ತು ಒಂದು ಕಮಿಷನ್ ಆಫ್ ಎನ್‌ಕ್ವೈರಿ ಮಾಡತಕ್ಕ ಒಬ್ಬ ಜಡ್ಜ್ ಇವರ ಕಾರ್ಯ ವ್ಯಾಪ್ತಿವರೆಗೆ ಶಾಸನ ಮಾಡತಕ್ಕ ನಾವೇ ಇಲ್ಲಿ ಲಘುವಾಗಿ ಹೋಲಿಕೆ ಮಾಡಿ ಮಾತನಾಡಿದರೆ ಮುಂದೆ ಜಡ್ಜ್ ಏನು ಮಾತನಾಡುತ್ತಾರೆ, ಜನು ಮಾತನಾಡುತ್ತಾರೆ ಎನ್ನುವುದನ್ನು ಸ್ವಲ್ಪ ಆಲೋಚನೆ ಮಾಡಿಕೊಂಡು ಇಲ್ಲಿ ವ್ಯಾಖ್ಯಾನವನ್ನು ಮಾಡುವುದು ಒಳ್ಳೆಯದು ಎಂದು ನನ್ನ ಸೂಚನೆ. ತಾವು ಸ್ವತಂತ್ರರು ಇದ್ದೀರಿ. ಶಾಸನ ಇದೆ,

ಪರಮಾಧಿಕಾರ ಇದೆ, ಸಾರ್ವಭೌಮತ್ವ ಇದೆ. ಎಲ್ಲಾ ಇದೆ. ಆದರೆ the intellectuals outside, the judges, the judiciary, what will they talk about us?

ಜಡ್ಜ್‌ಗೂ ಕಮೀಷನ್‌ಗೂ ಏನೂ ವ್ಯತ್ಯಾಸ ಶಾಸಕರಿಗೆ ಇಲ್ಲ ಎಂಬ ಅಭಿಪ್ರಾಯ ಬರುವುದು ನಮಗೆ ಬೇಕಾಗಿಲ್ಲ. It is in the interest of all of us. I leave it to your judgement. ಇವತ್ತು ನೀವು ಹೇಳುವುದ ತಪ್ಪು ಎಂದು ಆ ಮಾತು ನಾನು ಹೇಳುತ್ತಿಲ್ಲ. ಆದರೆ ಕೊನೆಯಲ್ಲಿ ಇದರ ಪರಿಣಾಮ ಏನು ಆಗುತ್ತದೆ ತಾವು ಕುಳಿತು ಇದರ ಬಗ್ಗೆ ಯೋಚನೆ ಮಾಡಬೇಕು. You can attack the report. We don't find fault with you. You are entitled to attack the report, every word of it. ನಾವು ಆಕ್ಷೇಪಣೆ ಮಾಡುವುದಿಲ್ಲ ಆದರೆ ಕೆಲವು ಪ್ಯಾರಾಮೀಟರ್ಸ್ ಏನು ಇದೆ, ಅದರ ಬಗ್ಗೆ ವ್ಯಾಖ್ಯಾನ ಮಾಡಿದರೆ ನಮ್ಮ ಮೇಲೆ ಎಷ್ಟು ಅಭಿಪ್ರಾಯ ಸಾರ್ವಜನಿಕರಿಗೆ, ಜುಡಿಷಿಯರಿಗೆ ಇದೆಯೋ ಇಲ್ಲವೋ ಅದು ಪ್ರತ್ಯೇಕ. ಆದರೆ ಅಭಿಪ್ರಾಯವನ್ನು ಇನ್ನೂ ಕೆಳಗಡೆ ಮಾಡತಕ್ಕದ್ದಕ್ಕೆ ನಾವು ಹೋಗಬಾರದೆಂದು ನನ್ನ ವಿನಂತಿ. ದಯವಿಟ್ಟು ಮಿಸ್ಟೇಕ್ ಮಾಡಿಕೊಳ್ಳಬಾರದು.

SRI R.V. DESHPANDE : I am within my parameters.

ನಾನು ಏನು ಹೇಳುತ್ತಿದ್ದೇನೆ ಎಂದರೆ, ನೀವು ಈಗ ಓತ್ ತೆಗೆದುಕೊಂಡಿದ್ದೀರಿ, ಪ್ರೊಟೆಕ್ಟ್ ಮಾಡುವುದಕ್ಕೆ ಬಯಾಸ್ ಇಲ್ಲ, ಕ್ಯಾಸ್ಟ್ ಕ್ರೀಡ್ ಎಲ್ಲಾ ಮುಂದೆ ಕೆಲಸ ಮಾಡುತ್ತಿದೆ ಎಂದು ನೀವು ಭಾವನೆಯನ್ನು ತೆಗೆದುಕೊಂಡರಲ್ಲ

4-15 ಪಿ.ಎಂ

I leave it to you as a Law Minister and also as a lawyer. Now come openly and tell us what is there in the Kuldip Singh Commission Report and what is there in the Dayal Commission Report. They were not political decision. Taking political decision is different. Witch-hunting is different ನೀವು ಸ್ಟ್ಯಾಂಡರ್ಡಾಗಿ ಮಾತನಾಡಿ ಎಂದು ಹೇಳುತ್ತೀರಲ್ಲ. Yes . I am prepared to come to that, but are you willing? you say Kuldip Singh commission. What is Kuldip Singh Commission? ಅದೇ ರೀತಿ ಮಾಡಿದರೆ ನಮಗೆ ಏನೂ ಪ್ರಶ್ನೆ ಇಲ್ಲ. ತಪ್ಪು ಯಾರು ಮಾಡಿದ್ದಾರೆ ಅವರ ಮೇಲೆ ತಾವು ಕ್ರಮವನ್ನು ತೆಗೆದುಕೊಳ್ಳಿ. ಅದನ್ನು ನಾವು ಎಂದಿಗೂ ಪ್ರಶ್ನೆ ಮಾಡುವುದಿಲ್ಲ. ಆದರೆ Who has given land? Not one inch of land has been given. The B.D.A. only passed a resolution. That Resolution was kept in cold storage. When Mr. Bommai became the Chief Minister, that resolution was rejected. The File never went to the Chief Minister. What was the issue before Kuldip Singh? 'Whether the B.D.A. has power to make bulk allotment or not'. If 'Yes' then the resolution need not come to the Government. There are several conditions imposed there. There are rulings of the High Court-Single Bench and Division Bench. The Hon'ble Minister Mr. George must be aware of it. What are the decisions? The B.D.A. has no right to make bulk allotment. In-spite of these judgements, Justice Kuldip Singh comes to the conclusion that the B.D.A. has powers to make bulk allotment. What about his bonafides? I want to ask you. A Supreme Court judge, he may be Commission , but the decision of the High Court is binding on him. How can he overlook thesse judgements? How could he

write this report? It is politically motivated. There should be some force asking him to write this report. I want to know, when there are judgements of the High Courts, how could he overlook them? I am very happy, the Chief Minister said that it should stand the legal scrutiny. ಹೀಗೆ ಯಾರು ತಪ್ಪು ಮಾಡುತ್ತಾರೆ ಅವರಿಗೆ ಕಠಿಣ ಕ್ರಮವನ್ನು ತೆಗೆದುಕೊಳ್ಳಿ. ಅದರ ಬಗ್ಗೆ ಪ್ರಶ್ನೆಯಿಲ್ಲ. ಈ Don't keep the hanging swords. Take a decision on that.ವಿಚಾರದ ಬಗ್ಗೆ ನನ್ನ ಕೆಲವು ವಿಚಾರಗಳನ್ನು ಹೇಳಿದ್ದೇನೆ. ಒಟ್ಟಿನಲ್ಲಿ ಈ ಸರಕಾರ ಎಲ್ಲಾ ಹಂತದಲ್ಲಿಯೂ ಕೂಡ ವಿಫಲವಾಗಿದೆ. ಈಗಾಗಲೇ ಹೇಳಿದ ಹಾಗೆ, ರೈತರಿಗೂ ಒಳ್ಳೆಯದಾಗಿಲ್ಲ, ಕೃಷಿ ಕಾರ್ಮಿಕರಿಗೂ ಒಳ್ಳೆಯದಾಗಿಲ್ಲ, ಜನ ಸಾಮಾನ್ಯರಿಗೂ ಒಳ್ಳೆಯದಾಗಿಲ್ಲ. ಇಂಥ ಸಂದರ್ಭದಲ್ಲಿ ಡಿಸೋಲ್ವ್ ಮಾಡುವು ಬಗ್ಗೆ ನಾವು ಕೇಳಿದೆವು. ಅದನ್ನು ಮಾಡುವುದಿಲ್ಲ ಎಂದು ಕೂಡ ಗೊತ್ತು. ಇನ್ನು ಮುಂದಾದರೂ ಒಳ್ಳೆಯ ಕೆಲಸಗಳನ್ನು ಮಾಡಿ ಯಾವುದೇ ತಕರಾರು ಇಲ್ಲದಂತೆ ಮಾಡಿದರೆ ನಮಗೆ ಬೇಸರವಿಲ್ಲ.

ಶ್ರೀ ಕೆ.ಜೆ. ಜಾರ್ಜ್ : ಜನತೆ ನಮಗೆ ಐದು ವರ್ಷಗಳ ಕಾಲ ಆಡಳಿತ ಮಾಡಲು ಅಪ್ಪಣೆ ಕೊಡಿಸಿದ್ದಾರೆ. ನಿಮಗೆ ಜನತೆ ಅಧಿಕಾರ ಕೊಟ್ಟಿದ್ದನ್ನು ಪಾಲಿಸಲು ನಿಮ್ಮಿಂದ ಆಗಲಿಲ್ಲ. ಆದರೆ ನಾವು ಜನತೆಯ ಆದೇಶವನ್ನು ಪೂರೈಸುತ್ತೇವೆ. ಆ ಬಗ್ಗೆ ಸಂಶಯ ಬೇಡ.

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ : ಕೇಂದ್ರದಲ್ಲಿ ನಿಮ್ಮ ಸರಕಾರ ಬಂದರೆ ಇಲ್ಲಿ ಎರಡು ಸೀಟ್ ಬಂದರೂ ಸಹ ನಾವು ಡಿಸೋಲ್ವ್ ಮಾಡುತ್ತೇವೆ ಎಂದು ಹೇಳುತ್ತಾ ಇದ್ದೀರಿ...

ಶ್ರೀ ಆರ್.ವಿ. ದೇಶಪಾಂಡೆ : ತಮಿಳುನಾಡಿನಲ್ಲಿ ತೆಗೆದುಕೊಂಡ ಕ್ರಮದ ಬಗ್ಗೆ ನಿಮಗೆ ನಾಚಿಕೆ ಬರಬೇಕು.

(ಗೊಂದಲ)

SRI R.V. DESHPANDE : What right you have got to continue in case we win majority seats here? The Chief Minister will have to recommend for dissolution. You have no moral rights.

(INTERRUPTIONS)

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ : ಕಳೆದ ಸಾರಿ ಡೆಲ್ಲಿಗೆ ಹೋಗಿದ್ದೀರಿ..

ಶ್ರೀ ಆರ್.ವಿ. ದೇಶಪಾಂಡೆ : ಕೊನೆಯದಾಗಿ ಕೈಗಾರಿಕೆ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ವಿಜಯನಗರ ಉಪ್ಪಿನ ಕಾರ್ಖಾನೆಯ ಬಗ್ಗೆ ಹೇಳಬೇಕಾದರೆ, ಈಗ ಜಾಯಿಂಟ್ ಸೆಕ್ಟಾರ್‌ನಲ್ಲಿ ಬರುತ್ತಾ ಇದೆ. ಬಹಳ ಒಳ್ಳೆಯ ಕೆಲಸವಾಗಿದೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಪ್ಲಾನಿಂಗ್ ಕಮಿಶನ್‌ನಲ್ಲಿ ಇದ್ದಾಗ ಒಂದು ಸಲಹೆ ಮಾಡಿದ್ದರು. ವಿಜಯನಗರ ಸ್ಟೀಲ್ ಪ್ಲಾಂಟ್ ಆಗಬೇಕು. ಅದು ಸಂತೋಷದ ವಿಚಾರವೇ ಆಗಿದೆ.

(ಗೊಂದಲ)

SRI R.V. DESHPANDE : Is Hegde a lion or tiger? Why are you afraid? ಮುಖ್ಯ ಕಾರ್ಯದರ್ಶಿಗಳು ಅಧ್ಯಕ್ಷತೆಯಲ್ಲಿ ಕಮಿಟಿಯನ್ನು ಏನು ಅಪಾಯಿಂಟ್ ಮಾಡಿದಿರಿ.

Is the Chief Secretary a qualified man? I know better balance sheet than the Chief Secretary because I have got shares of those Companies. The Chief Secretary, the Industries Secretary and 3/4 officers are the Members. Who are technically qualified? Not a single technically qualified man was there. Not a man who knows something about the balance sheet was there. What the Chief Secretary, poor fellow, would do? Mr. Prabhakar Rao was just promoted and brought. He had to say what the Chief Minister says.

What more can he say? I don't blame the Chief Secretary also.

When I ask these questions, the Chief Minister says, "He was General Manager, Mr. Rao" I know Mr. Rao. He was there in KSRTC. Is he a qualified man to say about Rs. 1500 crore project? To give it to ESSAR Gujarat, is he so qualified? What harm was there for this Government to involve a technical man, to involve a man who knows something about the working of these industries? I am not defending any industry. Local industries also are there. Bhorukas are there, Khodays are there. You told you would encourage local industries. Why you have neglected them? What is the reason? Are you not capable? What about Mukund Irons? They have a better experience. His balance sheet is better than ESSAR. He has got rich experience in this field than ESSAR. Why he was neglected? I am not defending anybody's case. ಆದರೆ ಚೀಫ್‌ಮಿನಿಸ್ಟರು ಇದೇ ತಜ್ಞರ ಸಮಿತಿ ಎಂದು ಹೇಳಿದರೆ ಅದನ್ನು ಒಪ್ಪಿಕೊಳ್ಳಲು ನಾವು ತಯಾರಿಲ್ಲ. There is definitely some consideration. Without consideration this deal has not taken place. And, what is that consideration, I would like to know from the Hon'ble Chief Minister. What harm was there for the Chief Minister to keep some qualified people in this Committee? ಉಪಾಧ್ಯಕ್ಷಿಣಿಯವರೇ, ಸಾಕಷ್ಟು, ಸಮಯ ನಾನು ತೆಗೆದುಕೊಂಡಿದ್ದೇನೆ. ಮತ್ತೊಮ್ಮೆ ಈ ಭಾಷಣಕ್ಕೆ ನನ್ನ ವಿರೋಧ ಸೂಚಿಸುತ್ತ ನನ್ನ ಮಾತು ಮುಗಿಸುತ್ತೇನೆ

ಉಪಾಧ್ಯಕ್ಷರು : ಮಾನ್ಯ ದೇಶಪಾಂಡೆಯವರು ಹೆಂಚ್‌ಮನ್ ಎಂಬ ಪದವನ್ನು ತಮ್ಮ ಭಾಷಣದಲ್ಲಿ ಜಡ್ಜ್‌ರವರನ್ನು ಕುರಿತು ಬಳಸಿದ್ದಾರೆ ಅದನ್ನು ಎಕ್ಸ್‌ಪಂಜ್ ಮಾಡಿದ್ದೇನೆ. ಈಗ ಶ್ರೀ ವೀರಪ್ಪ ಮೊಯಿಲಿಯವರು ಹೇಳಿಕೆ ಮಾಡುವರು.

ಮಂತ್ರಿಯವರಿಂದ ಹೇಳಿಕೆ

ತಾಂತ್ರಿಕ ನಿರ್ದೇಶನಾಲಯದಲ್ಲಿ ನಡೆದಿರುವ ಕೆಲವು ಅವ್ಯವಹಾರಗಳ ಬಗ್ಗೆ

ಶ್ರೀ ಎಂ. ವೀರಪ್ಪ ಮೊಯಿಲಿ : (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಪ್ರೊ. ನಂಜುಂಡಸ್ವಾಮಿಯವರು ಮತ್ತು ಶಾಸಕರಾದ ಶ್ರೀ ರೇವಣ್ಣನವರು ತಾಂತ್ರಿಕ ನಿರ್ದೇಶನಾಲಯದಲ್ಲಿ ನಡೆದಿರುವ ಕೆಲವು ಅವ್ಯವಹಾರಗಳ ಬಗ್ಗೆ ಪ್ರಶ್ನೆ ಎತ್ತಿದಾಗ ನಾನು ಹೇಳಿಕೆ ಮಾಡುತ್ತೇನೆಂದು ಹೇಳಿದ್ದೆ. ಈಗ ಹೇಳಿಕೆ ಮಾಡುತ್ತಿದ್ದೇನೆ.

1) ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿನ ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ

1970-80, 1980-81 ಮತ್ತು 1981-82 ರಲ್ಲಿ ಈ ಸಂಸ್ಥೆಗೆ ಬೇಕಾಗಿರುವ ಉಪಕರಣಗಳನ್ನು ಖರೀದಿಸುವಲ್ಲಿ ಅವ್ಯವಹಾರ ಉಂಟಾಗಿದೆ ಎಂದು ಇಲಾಖೆಯ